# ವನ್ಯ

ಹಸಿರು ಲೋಕದ ಕೌತುಕ

ಆಗಸ್ಟ್ 2025



ಅಘನಾಶಿನಿ ನೇಚರ್ ಫೌಂಡೇಶನ್

ಜ್ಞಾನದ ಹರಿವು

# ವನ್ಯ

ಹಸಿರು ಲೋಕದ ಕೌತುಕ

## ಪರಿವಿಡಿ


| ಕ್ರಮ ಸಂ | ಲೇಖನಗಳು | | ಪುಟ ಸಂ |
|---|---|---|---|
| | **ಕಾಡಿನ ಕತೆಗಳು** | | |
| 1 | ಧೂಪ ಮರ - ಪಶ್ಚಿಮ ಘಟ್ಟಗಳ "ಘರ್ಜನ" ವೀರ | -ಎನ್ ಎಂ ಗುರುಪ್ರಸಾದ್ | 1 |
| 2 | ಅಮ್ಮಾ ನನಗೂ ಹಾಲುಣಿಸಮ್ಮಾ...! | - ಶಶಿಧರಸ್ವಾಮಿ ಆರ್. ಹಿರೇಮಠ | 4 |
| 3 | ಕಳಚಿದ ಕೊಂಡಿಗಳು | -ಅಶೋಕ ಬಾವಿಕಟ್ಟಿ | 8 |
| | **ಸಸ್ಯ ಲೋಕ** | | |
| 4 | ಭೇದಿ ನಿವಾರಕ ಭೂಮಿ ಹುಣ್ಣಿಮೆ ಚರಗದಕಾಯಿ ಅಮಟೆಮರ | -ಉಮಾಪತಿ ಭಟ್ಟ ಕೆ ವಿ | 12 |
| | **ಹಸಿರು ಹಾಡು** | | |
| 5 | ಸಮುದ್ರ ಹಕ್ಕಿಗಳು ತೀರ ಪ್ರದೇಶಕ್ಕೆ ತಲುಪಲು... | | 16 |
| | **ಪ್ರಾಣಿ ಪ್ರಪಂಚದ ವಿಚಿತ್ರ ಪ್ರಭೇದಗಳು** | | |
| 6 | ಕಾಲಿನ ಪಾದಗಳಿಂದ ಮಾತನಾಡುವ ಪ್ರಾಣಿ ಆನೆ | -ಶ್ರೀ.ನವೀನ ಪ್ಯಾಟಿಮನಿ | 19 |



**ಮುಖ್ಯ ಸಂಪಾದಕರು**

ಕೆ ಪಿ ಧನಂಜಯ್ ಕುಮಾರ್

**ಸಂಪಾದಕೀಯ ತಂಡ**

ವಿಗ್ನೇಶ್ ಆಗುಂಬೆ

ಶ್ರೀನಿಧಿ ರಾಮಚಂದ್ರ ನಾಯ್ಕ

ನಯನ ಆರ್

ಪಾಂಡೀರ ಕೌಶಿಕ್ ಕಾವೇರಪ್ಪ

ನಮಿತಾ ಸಿ ಕಾನಳ್ಳಿಮಠ



ಮುಖಪುಟ: ಕೆ ಪಿ ಧನಂಜಯ್ ಕುಮಾರ್

ಲೇಖನ 01

# ಧೂಪ ಮರ
# ಪಶ್ಚಿಮ ಘಟ್ಟಗಳ "ಘರ್ಜನ" ವೀರ

ಪಶ್ಚಿಮ ಘಟ್ಟಗಳ ದಟ್ಟವಾದ, ಹಸಿರಿನಿಂದ ಕೂಡಿದ ಕಾಡುಗಳ ಒಡಲಲ್ಲಿ, ಆಕಾಶವನ್ನು ಮುಟ್ಟುವಂತೆ ಎತ್ತರಕ್ಕೆ ಏರುವ ಒಂದು ರಾಜಮರ ತನ್ನ ವೈಭವವನ್ನು ತೋರಿಸುತ್ತದೆ. ಇದೇ ಡಿಪ್ಟೆರೋಕಾರ್ಪಸ್ ಇಂಡಿಕಸ್, ಕನ್ನಡದಲ್ಲಿ "ಧೂಪದ ಮರ" ಅಥವಾ "ಘರ್ಜನ ಮರ" ಎಂದು ಕರೆಯಲ್ಪಡುವ ಈ ಮರ. ಈ ದೈತ್ಯ ಮರ ಕೇವಲ ಕಾಡಿನ ಸೌಂದರ್ಯವನ್ನು ಹೆಚ್ಚಿಸುವುದಷ್ಟೇ ಅಲ್ಲ, ಪರಿಸರ ವ್ಯವಸ್ಥೆಯ ಸಮತೋಲನ, ಔಷಧೀಯ ಕ್ಷೇತ್ರ, ಮತ್ತು ಸಾಂಸ್ಕೃತಿಕ ಸಂಪ್ರದಾಯಗಳಲ್ಲಿ ಒಂದು ಅನನ್ಯ ಪಾತ್ರವನ್ನು ವಹಿಸುತ್ತದೆ. ಇದರ ಘರ್ಜನೆಯಂತಹ ಶಬ್ದ, ಗಾಳಿಯ ಚಲನೆಯಿಂದ ಉಂಟಾಗುವ ಸದ್ದು, ಕಾಡಿನ ಜೀವನದ ಸಂಕೇತವಾಗಿದ್ದು, ಇದು ಪಶ್ಚಿಮ ಘಟ್ಟಗಳ ಜೈವಿಕ ವೈವಿಧ್ಯದ ಒಂದು ಜೀವಂತ ಚಿತ್ರವಾಗಿದೆ.

**ಧೂಪದ ಮರದ ವೈಶಿಷ್ಟ್ಯಗಳು**

ಡಿಪ್ಟೆರೋಕಾರ್ಪಸ್ ಇಂಡಿಕಸ್, ಡಿಪ್ಟೆರೋಕಾರ್ಪೇಸೀ ಕುಟುಂಬಕ್ಕೆ ಸೇರಿದ ಒಂದು ನಿತ್ಯಹರಿದ್ವರ್ಣದ, ಅಳಿವಿನಂಚಿನಲ್ಲಿರುವ ದೊಡ್ಡ ಮರವಾಗಿದೆ. ಇದು ಭಾರತದ ಪಶ್ಚಿಮ ಘಟ್ಟಗಳ ಉಷ್ಣವಲಯದ ಮಳೆಕಾಡುಗಳಲ್ಲಿ, ವಿಶೇಷವಾಗಿ ಕರ್ನಾಟಕದ ಕೊಡಗು, ಶಿವಮೊಗ್ಗ, ಉತ್ತರ ಕನ್ನಡ, ಕೇರಳದ ವಯನಾಡು, ಮತ್ತು ತಮಿಳುನಾಡಿನ ನೀಲಗಿರಿ ಜಿಲ್ಲೆಗಳ ದಟ್ಟ ಕಾಡುಗಳಲ್ಲಿ ಕಂಡುಬರುತ್ತದೆ.



ಚಿತ್ರ ಕೃಪೆ: ಎನ್ ಎಂ ಗುರುಪ್ರಸಾದ್

ಈ ಮರವು 30-40 ಮೀಟರ್ ಎತ್ತರಕ್ಕೆ ಬೆಳೆಯುವ ಸಾಮರ್ಥ್ಯವನ್ನು ಹೊಂದಿದ್ದು, ಕೆಲವೊಮ್ಮೆ 50 ಮೀಟರ್‌ಗೂ ಮೀರಿ ಆಕಾಶಕ್ಕೇರಬಲ್ಲದು. ಇದರ ನೇರವಾದ, ಗಟ್ಟಿಮುಟ್ಟಾದ ಕಾಂಡ ಮತ್ತು ವಿಶಾಲವಾದ ಟೊಂಗೆಗಳು ಕಾಡಿನ ಮೇಲಾವರಣವನ್ನು (ಕ್ಯಾನೋಪಿ) ರಚಿಸುತ್ತವೆ, ಇದರಿಂದ ಸೂರ್ಯನ ಬೆಳಕು ಕಾಡಿನ ತಳಮಟ್ಟಕ್ಕೆ ತಲುಪದಂತೆ ತಡೆಯುತ್ತದೆ. ಈ ಗುಣವು ಕಾಡಿನ ಒಂದು ವಿಶಿಷ್ಟವಾದ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸುತ್ತದೆ, ಅಲ್ಲಿ ನೆರಳನ್ನು ಅವಲಂಬಿಸುವ ಸಸ್ಯಗಳು ಮತ್ತು ಜೀವಿಗಳು ಆಶ್ರಯ ಪಡೆಯುತ್ತವೆ.

ಧೂಪದ ಮರದ ಬೇರುಗಳು ಆಳವಾಗಿ ಮಣ್ಣಿನೊಳಗೆ ಇಳಿಯುವುದರಿಂದ, ಭೂಕುಸಿತ ಮತ್ತು ಮಣ್ಣಿನ ಸವಕಳಿಯಂತಹ ಸಮಸ್ಯೆಗಳನ್ನು ತಡೆಯುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಈ ಬೇರುಗಳು ಮಣ್ಣಿನ ಒಡಲಿನಲ್ಲಿ ಜಾಲದಂತೆ ಹರಡಿಕೊಂಡು, ಭೂಮಿಯ ಸ್ಥಿರತೆಯನ್ನು ಕಾಪಾಡುತ್ತವೆ. ಇದರ ಕೊಂಬೆಗಳು ಮಳೆನೀರನ್ನು ಗ್ರಹಿಸುವ ಸಾಮರ್ಥ್ಯವನ್ನು ಹೊಂದಿವೆ, ವಿಶೇಷವಾಗಿ ಪಶ್ಚಿಮ ಘಟ್ಟಗಳಂತಹ ಪ್ರದೇಶದಲ್ಲಿ ವಾರ್ಷಿಕವಾಗಿ 5000-6000 ಮಿಮೀ ಮಳೆ ಸುರಿಯುವಾಗ, ಈ ಗುಣವು ಕಾಡಿನ ಜಲಚಕ್ರವನ್ನು ನಿರ್ವಹಿಸಲು ಸಹಾಯಕವಾಗಿದೆ. ಈ ಮರದ ಎಲೆಗಳು ದೊಡ್ಡದಾಗಿದ್ದು, ಹೊಳೆಯುವ ಹಸಿರು ಬಣ್ಣದಿಂದ ಕೂಡಿರುತ್ತವೆ. ಇವುಗಳ ಹೂವುಗಳು ಚಿಕ್ಕದಾದರೂ ಸುಗಂಧವನ್ನು ಹೊಂದಿರುತ್ತವೆ, ಮತ್ತು ಕಾಯಿಗಳು "ಪ್ಯಾರಾಶೂಟ್" ರಚನೆಯಿಂದ ಗಾಳಿಯ ಮೂಲಕ ಚದರಿ, ಸಂತಾನೋತ್ಪತ್ತಿಯನ್ನು ಸುಗಮಗೊಳಿಸುತ್ತವೆ.

ಧೂಪದ ಮರಗಳು ಸಾಮಾನ್ಯವಾಗಿ ಗುಂಪುಗುಂಪಾಗಿ ಬೆಳೆಯುತ್ತವೆ, ಒಂದು ನಿರ್ದಿಷ್ಟ ಪ್ರದೇಶದಲ್ಲಿ ಸಾಲುಗಟ್ಟಿ ನಿಂತಿರುವ ದೃಶ್ಯವು ಕಾಡಿನ ಸೌಂದರ್ಯಕ್ಕೆ ಮೆರಗು ನೀಡುತ್ತದೆ. ಈ ಮರದಿಂದ ಸಿಗುವ ಧೂಪವು ಅತ್ಯಂತ ಮೌಲ್ಯಯುತ ಉತ್ಪನ್ನವಾಗಿದೆ. ಈ ಧೂಪವನ್ನು ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ, ಔಷಧೀಯ ಉತ್ಪನ್ನಗಳಲ್ಲಿ, ಮತ್ತು ಧಾರ್ಮಿಕ ಸಂಸ್ಕಾರಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತದೆ. ಇದರ ಸುಗಂಧವು ಗಾಳಿಯಲ್ಲಿ ತೇಲುವಾಗ, ಒಂದು ನೆಮ್ಮದಿಯ ಪರಿಸರವನ್ನು ಸೃಷ್ಟಿಸುತ್ತದೆ, ಇದು ಮನಸ್ಸಿಗೆ ಶಾಂತಿ ಮತ್ತು ಆಧ್ಯಾತ್ಮಿಕತೆಯನ್ನು ತರುತ್ತದೆ. ಈ ಧೂಪದ ಸುಗಂಧವು ಕಾಡಿನಿಂದ, ಮನೆಯ ಒಡಲಿಗೆ ತಂದಾಗ, ಒಂದು ಪವಿತ್ರ ಭಾವನೆಯನ್ನು ಉಂಟುಮಾಡುತ್ತದೆ.

**ಪರಿಸರದಲ್ಲಿ ಧೂಪದ ಮರದ ಪಾತ್ರ**

ಧೂಪದ ಮರವು ಪಶ್ಚಿಮ ಘಟ್ಟಗಳ ಪರಿಸರ ವ್ಯವಸ್ಥೆಯ ಒಂದು ಜೀವನಾಡಿಯಾಗಿದೆ. ಇದರ ವಿಶಾಲವಾದ ಟೊಂಗೆಗಳು ಸಿಂಗಳೀಕಗಳಂತಹ ಅಳಿವಿನಂಚಿನಲ್ಲಿರುವ ಪ್ರಾಣಿಗಳಿಗೆ ಆವಾಸಸ್ಥಾನವನ್ನು ಒದಗಿಸುತ್ತವೆ. ಸಿಂಗಳೀಕ, ಇದರ ಎತ್ತರದ ಕೊಂಬೆಗಳಲ್ಲಿ ತನ್ನ ಗೂಡನ್ನು ಕಟ್ಟಿಕೊಂಡು, ತನ್ನ ಸಂತಾನವನ್ನು ಸುರಕ್ಷಿತವಾಗಿ ಬೆಳೆಸುತ್ತದೆ. ಇದರ ಬೇರುಗಳು ಮಣ್ಣಿನ ಸವಕಳಿಯನ್ನು ತಡೆಗಟ್ಟುವುದರ ಜೊತೆಗೆ, ಭೂಮಿಯ ಜಲಮೂಲಗಳನ್ನು ಸಂರಕ್ಷಿಸುತ್ತವೆ. ಈ ಮರಗಳು ಇಂಗಾಲದ ಡೈಆಕ್ಸೈಡ್‌ನ್ನು ಹೀರಿಕೊಂಡು ಆಮ್ಲಜನಕವನ್ನು ಬಿಡುಗಡೆ ಮಾಡುವ ಮೂಲಕ ಪರಿಸರ ಬದಲಾವಣೆಯ ವಿರುದ್ಧ ಹೋರಾಡಲು ಸಹಕಾರಿಯಾಗಿವೆ. ಒಂದು ಎತ್ತರದ ಧೂಪದ ಮರವು ತನ್ನ ಜೀವಿತಾವಧಿಯಲ್ಲಿ ಸಾವಿರಾರು ಕಿಲೋಗ್ರಾಂ ಇಂಗಾಲವನ್ನು ಶೇಖರಿಸಿಡಬಲ್ಲದು, ಇದು ಗಾಳಿಯ ಗುಣಮಟ್ಟವನ್ನು ಸುಧಾರಿಸುತ್ತದೆ.

ಈ ಮರವು ಕಾಡಿನ ಜೀವವೈವಿಧ್ಯಕ್ಕೆ ಒಂದು ಕೇಂದ್ರಬಿಂದುವಾಗಿದೆ. ಇದರ ಹೂವುಗಳು ಮತ್ತು ಕಾಯಿಗಳು ಕೀಟಗಳು, ಪಕ್ಷಿಗಳು, ಮತ್ತು ಸಣ್ಣ ಸಸ್ತನಿಗಳಿಗೆ ಆಹಾರವನ್ನು ಒದಗಿಸುತ್ತವೆ.



ಚಿತ್ರ ಕೃಪೆ: ಎನ್ ಎಂ ಗುರುಪ್ರಸಾದ್

ಉದಾಹರಣೆಗೆ, ಮಲಬಾರ್ ಹಾರ್ನ್‌ಬಿಲ್‌ನಂತಹ ಪಕ್ಷಿಗಳು ಈ ಮರದ ಕಾಯಿಗಳನ್ನು ತಿನ್ನುವ ಮೂಲಕ ತಮ್ಮ ಜೀವನವನ್ನು ಕಾಪಾಡಿಕೊಳ್ಳುತ್ತವೆ. ಇದರ ಧೂಪವು ಮಣ್ಣಿನ ರಾಸಾಯನಿಕ ಸಂಯೋಜನೆಯನ್ನು ಸಮತೋಲನಗೊಳಿಸುವಲ್ಲಿ ಸಹಾಯ ಮಾಡುತ್ತದೆ, ಇದರಿಂದ ಕಾಡಿನ ತಳಮಟ್ಟದ ಸಸ್ಯಗಳ ಬೆಳವಣಿಗೆಗೆ ಸೂಕ್ತ ವಾತಾವರಣ ಒದಗುತ್ತದೆ. ಈ ರೀತಿಯಾಗಿ, ಧೂಪದ ಮರವು ಕಾಡಿನ ಆಹಾರ ಚಕ್ರದಲ್ಲಿ ಪ್ರಮುಖ ಕೊಂಡಿಯಾಗಿದೆ. ಇದರ ಎಲೆಗಳು ಕಾಡಿನ ತಳಮಟ್ಟದಲ್ಲಿ ಕೊಳೆತು, ಸಾವಯವ ಗೊಬ್ಬರವಾಗಿ ಮಾರ್ಪಟ್ಟು, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತವೆ. ಇದರಿಂದ ಕಾಡಿನ ಇತರ ಸಸ್ಯಗಳಿಗೆ ಬೆಳವಣಿಗೆಗೆ ಅಗತ್ಯವಾದ ಪೋಷಕಾಂಶಗಳು ಲಭ್ಯವಾಗುತ್ತವೆ.

**ಔಷಧೀಯ ಮತ್ತು ಸಾಂಸ್ಕೃತಿಕ ಮಹತ್ವ**

ಈ ಘರ್ಜನ ಮರದ ಧೂಪವನ್ನು "ಗಂಧದ ತೈಲ" ಅಥವಾ "ಧೂಪದ ರಾಳ" ಎಂದು ಕರೆಯಲಾಗುತ್ತದೆ, ಆಯುರ್ವೇದದಲ್ಲಿ ಅತ್ಯಂತ ಮೌಲ್ಯಯುತವಾಗಿದೆ. ಈ ಧೂಪವು ಉರಿಯೂತವನ್ನು ಕಡಿಮೆ ಮಾಡುವ, ಗಾಯಗಳನ್ನು ಗುಣಪಡಿಸುವ, ಮತ್ತು ಚರ್ಮದ ಕಾಯಿಲೆಗಳಿಗೆ ಚಿಕಿತ್ಸೆ ನೀಡುವ ಗುಣಗಳನ್ನು ಹೊಂದಿದೆ. ಆಯುರ್ವೇದದಲ್ಲಿ ಇದನ್ನು ಗಂಧದ ತೈಲವಾಗಿ ಸಂಸ್ಕರಿಸಿ, ಆರೋಗ್ಯವನ್ನು ಕಾಪಾಡಲು ಬಳಸಲಾಗುತ್ತದೆ. ಈ ರಾಳವನ್ನು ಗಾಯದ ಮೇಲೆ ಹಚ್ಚಿದಾಗ, ಇದು ಬ್ಯಾಕ್ಟೀರಿಯಾ ವಿರುದ್ಧ ಕಾರ್ಯನಿರ್ವಹಿಸಿ, ಗಾಯವನ್ನು ಶೀಘ್ರವಾಗಿ ಗುಣಪಡಿಸುತ್ತದೆ.

ಇದರ ಧೂಪವನ್ನು ಸಾಂಪ್ರದಾಯಿಕ ಧೂಪದ ಕಡ್ಡಿಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ, ಇದು ಧಾರ್ಮಿಕ ಕಾರ್ಯಕ್ರಮಗಳಲ್ಲಿ, ದೇವಸ್ಥಾನಗಳಲ್ಲಿ, ಮತ್ತು ಧ್ಯಾನದ ಸಮಯದಲ್ಲಿ ಸುಗಂಧವನ್ನು ಹರಡುತ್ತದೆ. ಈ ಸುಗಂಧವು ಮನಸ್ಸಿಗೆ ಶಾಂತಿಯನ್ನು ತಂದು, ಆಧ್ಯಾತ್ಮಿಕ ಚಿಂತನೆಗೆ ಸಹಾಯ ಮಾಡುತ್ತದೆ.

ಕರ್ನಾಟಕದ ಆದಿವಾಸಿ ಸಮುದಾಯಗಳಾದ ಸೋಲಿಗ, ಕುರುಬ, ಮತ್ತು ಜೇನುಕುರುಬರಂತಹವರು ಈ ಮರವನ್ನು ಪವಿತ್ರವೆಂದು ಪರಿಗಣಿಸುತ್ತಾರೆ. ಈ ಮರದ ರಾಳವನ್ನು ತಮ್ಮ ಧಾರ್ಮಿಕ ವಿಧಿವಿಧಾನಗಳಲ್ಲಿ, ವಿಶೇಷವಾಗಿ ದೇವರ ಪೂಜೆ, ಶಾಂತಿ ಹೋಮ, ಮತ್ತು ಗ್ರಾಮದ ಸಂಸ್ಕಾರಗಳಲ್ಲಿ ಬಳಸುತ್ತಾರೆ. ಈ ಮರದ ಕಟ್ಟಿಗೆಯು ಗಟ್ಟಿಮುಟ್ಟಾಗಿದ್ದು, ಉತ್ತಮ ಗುಣಮಟ್ಟದ ಪೀಠೋಪಕರಣ ತಯಾರಿಕೆಗೆ, ಮರಮುಟ್ಟುಗಳಿಗೆ, ಮತ್ತು ಗೃಹನಿರ್ಮಾಣಕ್ಕೆ ಬಳಸಲಾಗುತ್ತದೆ. ಕೆಲವು ಆದಿವಾಸಿ ಸಮುದಾಯಗಳು ಈ ಮರದ ಎಲೆಗಳನ್ನು ಸಾಂಪ್ರದಾಯಿಕ ಔಷಧಿಗಳ ತಯಾರಿಕೆಗೆ ಬಳಸುತ್ತವೆ, ಇದರಿಂದ ಶೀತ, ಜ್ವರ, ಮತ್ತು ಗಂಟಲು ಕಾಯಿಲೆಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಈ ಎಲೆಗಳನ್ನು ಕುದಿಸಿ, ಆವಿಯನ್ನು ಒಳಗೊಗಿಸುವ ಮೂಲಕ ಶ್ವಾಸಕೋಶದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲಾಗುತ್ತದೆ.

**ಎನ್ ಎಂ ಗುರುಪ್ರಸಾದ್**
**ಪರಿಸರ ವಿಜ್ಞಾನಿ ಮತ್ತು ಯೋಜನಾ ಸಂಯೋಜಕರು**
**ಹೊನ್ನಾವರ ಫೌಂಡೇಶನ್**
**ಇಮೇಲ್ - guruprasad@honavar.com**

ಲೇಖನ 02

# ಅಮ್ಮಾ ನನಗೂ ಹಾಲುಣಿಸಮ್ಮಾ...!

ನಾಗರಹೊಳೆ ಹುಲಿ ಯೋಜನೆಯ ರಾಷ್ಟ್ರೀಯ ಉದ್ಯಾನವನದ ಕಬಿನಿ ದಮ್ಮನಕಟ್ಟೆ ವಲಯದ ಕಾಡಿನಲ್ಲಿ ವನ್ಯಜೀವಿ ಛಾಯಾಗ್ರಹಣಕ್ಕಾಗಿ ಅರಣ್ಯ ಇಲಾಖೆಯ ಜೀಪಿನಲ್ಲಿ ನಾನು ಹೇಮಚಂದ್ರ ಜೈನ್, ಪಾಲಹಳ್ಳಿ ಸುನೀಲ ಇಂಗ್ಲೋಸಿಸ್ ಸಾಗುತ್ತಿದ್ದೇವು. ಅರಣ್ಯವು ಹಚ್ಚಹಸಿರಿನ ಗಿಡ-ಮರಗಳಿಂದ ಕಂಗೊಳಿಸುತ್ತಿತ್ತು. ಆಗ ತಾನೇ ಉದಯಿಸಿದ ಭಾಸ್ಕರನಿಂದ ಖಗ-ಮೃಗಗಳು ಚಟುವಟಿಕೆ ಪ್ರಾರಂಭಿಸಿದ್ದವು. ನವಿಲುಗಳು ಮೇ-ಆವ್... ಮೇ-ಆವ್... ಮೇ-ಆವ್... ಎಂದು ಕಾಡಿಗೆಲ್ಲ ಮಾರ್ಧನಿಸುವಂತೆ ಕೂಗುತ್ತಿದ್ದವು. ತೆರದ ಜೀಪು ನಿಧಾನವಾಗಿ ಚಲಿಸುತ್ತಿತ್ತು. ಸ್ವಲ್ಪ ದೂರದ ಪೊದೆಯ ಮುಂದೆ ಹುಲ್ಲಿನಿಂದ ಕೂಡಿದ ಅಲ್ಲೊಂದು ಇಲ್ಲೊಂದು ಎತ್ತರದ ಮರಗಳಿರುವ ಬಯಲು ಜಾಗೆಯಲ್ಲಿ ಜಿಂಕೆಗಳ ಹಿಂಡು ಸ್ವಚಂದವಾಗಿ ಹುಲ್ಲನ್ನು ಮೇಯುತ್ತಿದ್ದವು. ತಕ್ಷಣ ಚಾಲಕನಿಗೆ ವಾಹನ ನಿಲ್ಲಿಸುವಂತೆ ಸೂಚನೆಯಿತ್ತು, ಅವುಗಳ ನಾಲ್ಕಾರು ಪೋಟೋ ಕ್ಲಿಕ್ಕಿಸುತ್ತಿದ್ದ ಹಾಗೇ ಜಿಂಕೆಯ ಮರಿಯೊಂದು ಪುಟ್ಟ ನೆಗೆತದೊಂದಿಗೆ ಓಡೋಡಿ ಬಂದು ತಾಯಿಯನ್ನು ಸೇರಿ ಹಾಲು ಕುಡಿಯಲು ಪ್ರಾರಂಭಿಸಿತು.

ಎತ್ತರದ ಮರಗಳ ನೆರಳು ಜಿಂಕೆಯ ಮೇಲೆ ಬಿದ್ದಿದ್ದರೇ, ಸೂರ್ಯನ ಕಿರಣವು ಪೊದೆಯ ಮೇಲೆ ಬಿದ್ದು ಪೊದೆಯೇ ಹೈಲೆಟ್ಟಿದ್ದು ಅದನ್ನು ಹೊಗಲಾಡಿಸಲು ಕ್ಯಾಮರಾದಲ್ಲಿ ರಿಡಿಂಗ್ ಸೆಟ್ ಮಾಡಿಕೊಂಡು ಪೊಟೋಗ್ರಫಿಗೆ ಅಣಿಯಾದೆ. ನಿಂತ ಜಾಗದಲ್ಲಿ ನಿಲ್ಲದೇ ಮುಂದೆ ಸಾಗುತ್ತಿದ್ದವು. ನಮ್ಮ ಜೀಪು ಅವನ್ನೇ ಫಾಲೋ ಮಾಡುತ್ತಾ ಸಾಗುತ್ತಿತ್ತು.



ಚಿತ್ರ ಕೃಪೆ: ಶಶಿಧರಸ್ವಾಮಿ ಆರ್. ಹಿರೇಮಠ

ಜಿಂಕೆಗಳಿಗೆ ಒಂದೇ ಮರಿಯಲ್ಲವೇ ಇದರಲ್ಲಿ ಏನೂ ವಿಶೇಷ ಅಂತಿರಾ?
ಒಂದೆರಡು ನಿಮಿಷ ಕಳೆದಿರಬೇಕು ಚಂಗನೆ ಜಿಗಿಯುತ ಇನ್ನೊಂದು ಮರಿಯು ತಾಯಿಯನ್ನು ಸಮೀಪಿಸಿ ಅಮ್ಮಾ ನನಗೂ ಹಾಲುಣಿಸಮ್ಮಾ...! ಎಂಬಂತೆ ಗೋಚರಿಸಿತು. ಈ ತಾಯಿ ಜಿಂಕೆಗೆ ಎರಡು ಮರಿಗಳಿರುವುದೇ ವಿಶೇಷ ಮತ್ತು ಅಚ್ಚರಿ. ಜಿಂಕೆಗಳು ಒಂದು ಸೂಲಿಗೆ ಒಂದೇ ಮರಿಯನ್ನು ಹೆರುತ್ತವೆ. ಅಪರೂಪವಾಗಿ ಎರಡು ಮರಿಗಳಿಗೆ ಜನ್ಮ ನೀಡುತ್ತವೆ. ಹಾಗೆ ಈ ಜಿಂಕೆಗೆ ಎರಡು ಮರಿಗಳು, ಅವಳಿ-ಜವಳಿ ಇದ್ದಂತೆ. ತಾಯಿಯು ಇನ್ನೊಂದು ಮರಿಯನ್ನು ಸಂಭಳಿಸಲು ಪ್ರೀತಿಯಿಂದ ಮುಖ, ಕುತ್ತಿಗೆಯನ್ನು ತನ್ನ ನಾಲಿಗೆಯಿಂದ ನೆಕ್ಕುತ್ತಾ ಮೈದಡವಿ ಪ್ರೀತಿಯಿಂದ ಆಲೈಸಿತು. ಹೋಗು ಕಂದಾ ಹುಲ್ಲನ್ನು ತಿನ್ನು ಆ ಮೇಲೆ ಹಾಲುಣಿಸುವೆ ಎಂದು ಸಂವೇದಿಸಿದಾಗ ಮರಿಯು ಆಯ್ತು ಎಂಬಂತೆ ಹಿಂಡಿನಲ್ಲಿ ಸೇರಿ ಗೆಳೆಯರೊಂದಿಗೆ ಸೇರಿ ಹುಲ್ಲನ್ನು ಮೇಯತೊಡಗಿತು.

ನಾವು ನಿಂತು ಫೊಟೋ ಕ್ಲಿಕ್ಕಿಸಿದಕ್ಕೆ ತಾಯಿಗೆ ನಾಚಿಕೆಯಾಗಿರಬೇಕು, ಮರಿಯನ್ನು ಕಾಲಿನಿಂದ ತಳ್ಳಿದಾಗ ಮರಿಯು ಹಾಲು ಕುಡಿಯುವುದನ್ನು ಬಿಟ್ಟಿತು. ಆಗ ತಾಯಿ-ಮರಿಗಳು ಹಿಂಡಿನಲ್ಲಿ ಹುಲ್ಲನ್ನು ಮೇಯತೊಡಗಿದವು. ಎಲ್ಲ ದೃಶ್ಯಗಳು ನನ್ನ ಕ್ಯಾಮರಾದಲ್ಲಿ ಸೆರೆಯಾದವು. ನಮ್ಮ ಜೀಪು ಮತ್ತೊಂದು ವನ್ಯಜೀವಿಯನ್ನು ಹುಡುಕಿಕೊಂಡು ನಿಧಾನವಾಗಿ ಪಯಣಿಸಿತು.



ಚಿತ್ರ ಕೃಪೆ: ಶಶಿಧರಸ್ವಾಮಿ ಆರ್. ಹಿರೇಮಠ

**ಜಿಂಕೆಗಳ ವಿವರಣೆ:**

ಜಿಂಕೆಗಳನ್ನು ಹರಣಿ, ಹರಿಣ, ಚುಕ್ಕೆ ಜಿಂಕೆ, ಹುಲ್ಲೆ, ಕುರಂಗ, ಸಾರಗ, ಏಣ ಎಂತೆಲ್ಲಾ ಕರೆದು, ಆಂಗ್ಲ ಭಾಷೆಯಲ್ಲಿ ಸ್ಪಾಟೆಡ್ ಡೀರ್ (Spotted Deer) ಚಿತಾಲ್ (Chital) ಅಥವಾ ಚಿತಾಲ್ ಡೀರ್ (Chital Deer) ಎಂದು ಕರೆದು, ಪ್ರಾಣಿ ಶಾಸ್ತ್ರೀಯವಾಗಿ ಆಕ್ಸಿಸ್ ಆಕ್ಸಿಸ್ (Axis axis) ಎಂದು ಹೆಸರಿಸಿ, ಕಾರ್ಡೇಟಾ (Chordata) ವಂಶದ, ಸಸ್ತನಿ (Mammalia) ವರ್ಗದ, ಗೊರಸುಗಳ ಆರ್ಟಿಯೊಡಾಕ್ಟೈಲಾ (Artiodactyla) ಗಣದ, ಚರ್ವಿಡೇ (Cervidae) ಕುಟುಂಬಕ್ಕೆ ಸೇರಿಸಲಾಗಿದೆ.

ಜಿಂಕೆಗಳು ಭಾರತದ ಹಿಮಾಲಯ ತಪ್ಪಲಿನಿಂದ ಕನ್ಯಾಕುಮಾರಿಯವರೆಗೂ ಕಂಡು ಬರುತ್ತವೆಯಾದರೂ ಮರಭೂಮಿ ಪ್ರದೇಶವಾದ ಪಂಜಾಬ ಹಾಗೂ ರಾಜಸ್ಥಾನದ ಕೆಲ ಭಾಗಗಳಲ್ಲಿ ವಾಸಿಸುವುದಿಲ್ಲ. ಕರ್ನಾಟಕದ ಕಾಡುಗಳಲ್ಲಿ ಹೇರಳವಾಗಿ ಕಾಣಸಿಗುತ್ತವೆ. ಇವುಗಳು ಸುಂದರ ಕಂದು ಮೈಮಾಟದ ಮಧ್ಯಮಗಾತ್ರದ ಪುಕ್ಕಲು ಜೀವಿಗಳು. ಗಂಡು ಜಿಂಕೆಗಳನ್ನು ಸಾರಂಗಗಳೆನ್ನುವರು. ಸಾರಂಗವು ಭುಜ ಸುಮಾರು 90 ಸೆಂ.ಮೀ ಮತ್ತು ಹೆಣ್ಣು 70 ಸೆಂ.ಮೀ ತಲುಪುತ್ತದೆ. ಸಾರಂಗದ ತೂಕ 30-75 ಕೆ.ಜಿ. ಹೆಣ್ಣುಗಳ ತೂಕ 25-45 ಕೆ.ಜಿಗಳಷ್ಟಿವೆ. ಹೊನ್ನಿನ ಮೈ ಬಣ್ಣದ ಮೇಲೆ ಆಕರ್ಷಕವಾದ ಬಿಳಿ ಚುಕ್ಕೆಗಳಿವೆ. ಕಪ್ಪು ಪಟ್ಟಿಯೂ ನಡು ಬೆನ್ನಿನ ಮೇಲೆ ಹುರಿಯಂತೆ ಕುತ್ತಿಗೆಯಿಂದ ಬಾಲದವರೆಗೆ ಹರಡಿದೆ. ಹೊಟ್ಟೆಯ ತಳ ಭಾಗವು ಮಾಸಲು ಬಿಳುಪಾಗಿದೆ. ಕಾತುರ ಮತ್ತು ಚಂಚಲತೆಯ ನೋಟದ ವಿಶಾಲವಾದ ಕಣ್ಣುಗಳು, ಶಬ್ದ ಬಂದ ದಿಕ್ಕಿನತ್ತ ತಿರುಗಿ ನಿಮಿರಿ ನಿಲ್ಲುವ ಕಿವಿಗಳು. ಬಾಲದ ತಳಭಾಗವು ಬಿಳಿ. ಸಾರಂಗಗಳು ಹೆಣ್ಣುಗಳಿಗಿಂತ ಗಾತ್ರದಲ್ಲಿ ದೊಡ್ಡವು ಮತ್ತು ಸುಮಾರು ಒಂದು ಮೀಟರ ಉದ್ದವಿರುವ ಮೂರು ಮುಖದ ಕೊಂಬುಗಳನ್ನು ಹೊಂದಿವೆ.



ಚಿತ್ರ ಕೃಪೆ: ಶಶಿಧರಸ್ವಾಮಿ ಆರ್. ಹಿರೇಮಠ

ವಯಸ್ಸಾದ ಸಾರಂಗವು ಕಡು ಕಂದು ಬಣ್ಣದ್ದಾಗಿದೆ. ಪಕ್ಕೆಯ ಕೆಳಗಿನ ಸಾಲಿನ ಬಿಳಿ ಚುಕ್ಕೆಗಳು ಉದ್ದ ಸಾಲಿನಲ್ಲಿ ಒಂದೇ ರೇಖೆಯಲ್ಲಿ ಕಾಣಿಸುತ್ತವೆ. ಸಾರಂಗಗಳು ಪ್ರತಿ ವರ್ಷವೂ ತನ್ನ ಕೋಡುಗಳನ್ನು ಬಿಳಿಸಿ ಅದೇ ಜಾಗದಲ್ಲಿ ಹೊಸ ಕೋಡು ಒಡಮೂಡಲು ಅನುವು ಮಾಡಿಕೊಡುತ್ತದೆ.

ಇವುಗಳು ಹಿಂಡುಗಳಲ್ಲಿ ವಾಸಿಸುತ್ತವೆ. ಒಂದು ಹಿಂಡಿನಲ್ಲಿ 10 ರಿಂದ 30 ಜಿಂಕೆಗಳಿರುತ್ತವೆ. ಎರಡು ಅಥವಾ ಮೂರು ಸಾರಂಗಗಳಿದ್ದು ಉಳಿದವು ಹೆಣ್ಣು ಹಾಗೂ ಮರಿಗಳು. ಸಾಮಾನ್ಯವಾಗಿ ಪ್ರಾಯದ ಹೆಣ್ಣು ಜಿಂಕೆಯು ಹಿಂಡಿನ ಮುಂದಾಳತ್ವವನ್ನು ವಹಿಸಿದರೂ ಬಲಿಷ್ಟವಾದ ಸಾರಂಗವು ಹಿಂಡಿನ ನಾಯಕ. ಅಪಾಯ ಕಂಡು ಬಂದಾಗ ಇದು ತನ್ನ ಬಾಲವನ್ನು ಎತ್ತಿ ಬೆಳ್ಳಗಿನ ಭಾಗವನ್ನು ತೋರ್ಪಡಿಸಿ ಹಿಂಡಿನ ಇತರ ಜಿಂಕೆಗಳಿಗೆ ಎಚ್ಚರಿಕೆ ನೀಡುತ್ತವೆ. ಹುಲ್ಲು, ಎಳೆ ಚಿಗುರು ಮುಖ್ಯಾಹಾರವಾಗಿದೆ. ಜೊತೆಗೆ ಅತ್ತಿ, ಆಲ, ಕರಂಬಳದಂತಹ ಅರಣ್ಯ ಮರುಗಳು ಹಣ್ಣು ಬಿಟ್ಟು ಅವು ಉದರಿ ನೆಲಕ್ಕೆ ಬಿದ್ದಾಗ ಅವನ್ನು ತಿನ್ನಲು ಮುಗಿಬೀಳುತ್ತವೆ. ವಾನರಗಳ ಹಿಂಡುಗಳು ಹೂ ಮತ್ತು ಹಣ್ಣುಗಳನ್ನು ಬಿಳಿಸುವುದರಿಂದ ಅವುಗಳನ್ನು ಬೆಂಬತ್ತುತ್ತವೆ. ಮೇಲ್ದವಡೆಯ ಕೋರೆ ಹಲ್ಲುಗಳು ಇರುವುದಿಲ್ಲ ಆದರೆ ಹಲ್ಲುಗಳು ಸಸ್ಯಾಹಾರಕ್ಕೆ ಮಾರ್ಪಟ್ಟಿವೆ. ಮುಂಜಾವಿನಲ್ಲಿ ಮೇಯಲು ಪ್ರಾರಂಭಿಸುವ ಇವು ನಡುನಡುವೆ ನೆರಳಿನಲ್ಲಿ ಮಲಗಿ ವಿರಮಿಸಿ ಮತ್ತೆ ಪುನಃ ಮಧ್ಯಾಹ್ನದ ಸಮಯದಲ್ಲಿಯೂ ಹಾಗೂ ಸಂಜೆ ಹೊತ್ತಲೂ ಮೇಯಿತ್ತಿರುತ್ತವೆ. ಇವುಗಳ ಕೂಗು ಸಿಳ್ಳೆಯಂತಿದೆ.


ಚಿತ್ರ ಕೃಪೆ: ಶಶಿಧರಸ್ವಾಮಿ ಆರ್. ಹಿರೇಮಠ

ಸಂತಾನಾಭಿವೃದ್ಧಿ ಋತುವಿನಲ್ಲಿ ಸಾರಂಗಗಳು ಮದವೇರಿ ಸಂಭೋಗಕ್ಕೆ ತಯಾರಾಗುತ್ತವೆ. ಹೆಣ್ಣುಗಳನ್ನು ಒಲಿಸಿಕೊಳ್ಳಲು ಎರಡು ಸಾರಂಗಗಳ ನಡುವೆ ಗುದ್ದಾಟ ನಡೆಯುತ್ತವೆ ಇದಕ್ಕೆ ಇಂಗ್ಲೀಷಿನಲ್ಲಿ Stag Sparring ಎನ್ನುತ್ತಾರೆ. ಎರಡು ಸಾರಂಗಗಳು ತಮ್ಮ ಕೊಂಬೆಗಳನ್ನು ಒಂದಕ್ಕೊಂದು ಗುದ್ದಿ ಸೆಣೆಸಾಡುತ್ತವೆ ಹಾಗೇ ಮತ್ತೆ ಹಿಂದೆ ಸರಿದು ಮತ್ತೇ ಜೊರಾಗಿ ಓಡಿ ಬಂದು ಗುದ್ದುತ್ತವೆ. ಈ ಗುದ್ದಾಟವಾಗುತ್ತಿರುವ ಕೊಂಬುಗಳಿಂದ ಕಟ್ ಕಟ್ ಎಂಬ ಸದ್ದು ಕಾಡಿನಲ್ಲಿ ಮಾರ್ದನಿಸುತ್ತಿರುತ್ತದೆ. ಗೆದ್ದ ಸಾರಂಗವು ಹೆಣ್ಣಿನ ಜೊತೆ ಮಿಲನಗೊಳ್ಳುತ್ತದೆ. ಬೆದೆಗೆ ಬಂದ ಗಂಡು ಗಡುಸಾಗಿ ಕೂಗುತ್ತದೆ. ಮತ್ತು ಕಣ್ಣಿನ ಕೆಳಗಿರುವ ವಾಸನಾ ಗ್ರಂಥಿಗಳ ಸ್ರವಿಸುವಿಕೆಯಿಂದಲೂ ಗಂಡು-ಹೆಣ್ಣುಗಳು ಒಂದಕ್ಕೊಂದು ಸಂಪರ್ಕಕ್ಕೆ ಒಳಪಟ್ಟು ಕೂಟಗೊಳ್ಳುತ್ತವೆ. ಗರ್ಭಾವಧಿಯು 7 ರಿಂದ 8 ತಿಂಗಳ ಕಾಲವಾಗಿದ್ದು ಒಂದು ಸೂಲಿಗೆ ಒಂದೇ ಮರಿಯನ್ನು ಹೆರುತ್ತವೆ ಅಪರೂಪವಾಗಿ ಎರಡು ಮರಿಗಳಿಗೆ ಜನ್ಮ ನೀಡುತ್ತವೆ. ಇವುಗಳ ಜೀವಿತಾವಧಿಯು 10 ರಿಂದ 15 ವರ್ಷಗಳು.

ಆಗಾಗ ನೀರಿಗಳಿದು ಈಜಬಲ್ಲವು. ಜಿಂಕೆಗಳನ್ನು ಕಾಡುನಾಯಿ, ಹುಲಿ, ಚಿರತೆ, ಹೆಬ್ಬಾವುಗಳು ಬೇಟೆಯಾಡಿ ಭಕ್ಷಿಸುತ್ತವೆ. ಹಾಗೂ ಮಾನವರು ಮಾಂಸ ಹಾಗೂ ಚರ್ಮಕ್ಕಾಗಿ ಕಳ್ಳ ಬೇಟೆಯಾಡುತ್ತಾರೆ. ಸಾಧು-ಸಂತರು ಕುಳಿತುಕೊಳ್ಳಲು ಇದರ ಚರ್ಮವನ್ನು ಹಾಸಿ ಬಳಸುತ್ತಾರೆ. ಕೊಂಬನ್ನು ನಾಟೀ ಔಷಧಿಯಲ್ಲಿ ಬಳಸಲಾಗುತ್ತಿದೆ.

::::::::::::::::::::::::::::::::::::::::::::

**ಶಶಿಧರಸ್ವಾಮಿ ಆರ್. ಹಿರೇಮಠ**
**ಕದರಮಂಡಲಗಿ, ಹಾವೇರಿ ಜಿಲ್ಲೆ**
**ಇಮೇಲ್:shashidhharswamyhiremath@gmail.com**

ಲೇಖನ 03

# ಕಳಚಿದ ಕೊಂಡಿಗಳು

ಕಾಡುಗಳೆಂದರೆ ಪಶ್ಚಿಮ ಘಟ್ಟಗಳ ದಟ್ಟ ಕಾಡುಗಳೆಂದೇ ಭಾವಿಸಿದ ಹಲವರಿಗೆ ನಮ್ಮ ವಿಜಯನಗರ ಹಾಗೂ ಬಳ್ಳಾರಿ ಅವಳಿ ಜಿಲ್ಲೆಗಳ ಕುರುಚಲು ಕಾಡುಗಳು ಅಪರಿಚಿತ. ವಿಸ್ತಾರದಲ್ಲಿ ರಾಜ್ಯದಲ್ಲೇ ಎರಡನೇ ಸ್ಥಾನದಲ್ಲಿರುವ ಕುರುಚಲು ಅರಣ್ಯ ಪ್ರದೇಶ ಈ ಉಭಯ ಜಿಲ್ಲೆಯಲ್ಲಿದೆ. ಮತ್ತೊಂದು ವಿಶೇಷವೆಂದರೆ ಅಲ್ಲಲ್ಲಿ ತುಂಗಭದ್ರಾ ನದಿಯ ಒಡಲು ಈ ಕಾಡಿಗೆ ಅಂಟಿಕೊಂಡಿದೆ.

ನಮ್ಮ ಜಿಲ್ಲೆಯ ಈ ಕುರುಚಲು ಕಾಡುಗಳು ಆಫ್ರಿಕಾ ಕಾಡುಗಳ ತದ್ರೂಪವೆಂದರೆ ಅತಿಶಯೋಕ್ತಿಯೇನಲ್ಲ. ಒಂದೇ ವ್ಯತ್ಯಾಸವೆಂದರೆ ಆಫ್ರಿಕಾದ ಕಾಡುಗಳು ವಿಸ್ತೀರ್ಣದಲ್ಲಿ ಬೃಹತ್ ಮತ್ತು ಅಖಂಡ ಕಾಡುಗಳು. ಆದರೆ ನಮ್ಮ ಭಾಗದ ಕಾಡುಗಳು ಮಾನವನ ಹಸ್ತಕ್ಷೇಪದಿಂದ ತುಂಡು ತುಂಡಾಗಿ ಹರಿದು ಹಂಚಿ ಹೋಗಿವೆ. ಉಪಗ್ರಹ ಆಧಾರಿತ ಅಧ್ಯಯನದ ಪ್ರಕಾರ 2000 ಕ್ಕಿಂತ ಹೆಚ್ಚು ತುಂಡುಗಳಾಗಿವೆ! ಅಲ್ಲಲ್ಲಿ ಅಳಿದುಳಿದಿರುವ ಕೆಲವು ತುಂಡುಗಳನ್ನು "ಮೀಸಲು ಅರಣ್ಯ ಪ್ರದೇಶ" ಗಳೆಂದು ನಾಮಕರಣ ಮಾಡುವಲ್ಲಿ ನಾವು ಯಶಸ್ವಿಯಾಗಿದ್ದೇವೆ. ದರೋಜಿ, ಸಂಡೂರು, ಗುಡೇಕೋಟೆ, ಆನೇಕಲ್ಲು, ಬಪ್ಪಲಾಪುರ, ಕಂದಗಲ್ಲು, ಚಿರಬಿ, ಪಾಲಯ್ಯನಕೋಟೆ, ಅರಸನಾಳು, ತುಂಬಿನಕೆರೆ, ವೀರಾಪುರ, ಹ್ಯಾರಡದಂತಹ ಮೀಸಲು ಅರಣ್ಯ ಪ್ರದೇಶಗಳೇ ಪ್ರಸ್ತುತ ದೊಡ್ಡ ಕಾಡಿನ ತುಂಡುಗಳು. ದುರಾದೃಷ್ಟವೆಂದರೆ ಈ ಮೇಲ್ಕಾಣಿಸಿದ ಬಹುತೇಕ ಕಾಡುಗಳು ಪ್ರಮುಖ ಜೀವಜಲದ ಮೂಲವಾದ ತುಂಗಭದ್ರ ನದಿಯಿಂದ ಬೇರ್ಪಟ್ಟಿವೆ.

ಇದರ ಪರಿಣಾಮ ಅರಣ್ಯ ಪರಿಸರ ಮತ್ತು ವನ್ಯ ಜೀವ ಸಂಕುಲಕ್ಕೆ ಆಗಿರುವ ನಷ್ಟ ಅಷ್ಟಿಷ್ಟಲ್ಲ. ಅದಕ್ಕೆ ಲೆಕ್ಕವೂ ಇಲ್ಲ, ವಿಷಾದವೂ ಇಲ್ಲ, ಅದರ ನಷ್ಟದ ಊಹೆಯೂ ಇಲ್ಲ.
ವಿಪರ್ಯಾಸವೆಂದರೆ ಯಾರಿಗೂ ಭವಿಷ್ಯದ ಭಯವೂ ಇಲ್ಲ!!!


ಚಿತ್ರ ಕೃಪೆ: ಮಂಜುನಾಥ ಕಣವಿ

ಸೀಮಿತ ಅರಣ್ಯದಿಂದಾಗಿ ವನ್ಯ ಜೀವಿಗಳಲ್ಲಿ In Breeding ಅಂದರೆ ಒಂದೇ ಕುಟುಂಬದಲ್ಲಿ ಸಂತಾನೋತ್ಪತ್ತಿ ನಡೆಸುವುದರಿಂದ ಹೊಸ ಪೀಳಿಗೆಯಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆಯಾಗಿ ಸಂತತಿ ಕ್ಷೀಣಿಸುತ್ತಿದೆ. ಅದಲ್ಲದೆ ಛಿದ್ರಗೊಂಡ ಅರಣ್ಯದಿಂದಾಗಿ ವಲಸೆ ಮಾರ್ಗಗಳು ಮುಚ್ಚಿ ಹೋಗಿರುವುದರಿಂದ ವನ್ಯ ಜೀವಿಗಳು ಆಹಾರ, ನೀರು ಅರಸಿಕೊಂಡು ಜನವಸತಿ ಪ್ರದೇಶಗಳಿಗೆ ಲಗ್ಗೆ ಇಡುತ್ತಿವೆ. ಇದರಿಂದ ಆಗುವ ಸಂಘರ್ಷದಿಂದ ವನ್ಯ ಜೀವಿಗಳು ಜೀವ ಕಳೆದುಕೊಳ್ಳುತ್ತಿವೆ.

ಇದಕ್ಕೆ ಪೂರಕವಾಗಿ ಕಳೆದ ಒಂದು ವರ್ಷದಲ್ಲೇ ಎರಡೂ ಜಿಲ್ಲೆಗಳಲ್ಲಿ ಕರಡಿ, ತೋಳ, ಚಿರತೆ, ಕೃಷ್ಣಮೃಗ ಇತ್ಯಾದಿ ಪ್ರಾಣಿಗಳು ಹಲವು ಬಾರಿ ಜನವಸತಿ ಪ್ರದೇಶಗಳಲ್ಲಿ ಕಂಡು ಬಂದಿದ್ದು, ಮಾನವ ಮತ್ತು ವನ್ಯಜೀವಿ ಸಂಘರ್ಷಕ್ಕೆ ಕೈಗನ್ನಡಿಯಾಗಿವೆ. ರಾಜ್ಯದ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ನಡೆಯುತ್ತಿರುವ ಆನೆದಾಳಿ ಮತ್ತು ಹುಲಿದಾಳಿಗಳ ನಡುವೆ ನಮ್ಮ ಜಿಲ್ಲೆಯಲ್ಲಿನ ಕುರುಚಲು ಕಾಡುಗಳಲ್ಲಿ ನಡೆಯುತ್ತಿರುವ ಈ ಸಂಘರ್ಷದ ಕೂಗು ಮೂಕ ಹಕ್ಕಿಯ ಹಾಡಾಗಿದೆ.


ಚಿತ್ರ ಕೃಪೆ: ಮಂಜುನಾಥ ಕಣವಿ

ಹುಲಿ, ಆನೆಗಳನ್ನು ಉಳಿಸಿ ಬೆಳೆಸುವ ಭರದಲ್ಲಿ ನಮ್ಮ ಭಾಗದ ಕುರುಚಲು ಕಾಡಿನ ವನ್ಯ ಜೀವಿಗಳಾದ ತೋಳ, ಕತ್ತೆಕಿರುಬ (Hyna), ಕೊಂಡುಕುರಿ (Four Horned anti loop), Indian pangolin, ಪುನುಗು ಬೆಕ್ಕು, ಚಿಂಕಾರ, ಕರಡಿ, ನರಿಯಂತಹ ಅನೇಕ ವನ್ಯ ಜೀವಿಗಳ ಅಳಲನ್ನು ಕೇಳುವವರಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಹುಲಿಗಳನ್ನು ನೋಡುವುದು ಸುಲಭ. ಆದರೆ ತೋಳಗಳನ್ನು ಕಾಣಸಿಗುವುದು ಕಷ್ಟಸಾಧ್ಯ. ಕಾಕತಾಳೀಯವೆಂಬಂತೆ ಇತ್ತೀಚಿನ ದಿನಗಳಲ್ಲಿ ವನ್ಯಜೀವಿ ಆಸಕ್ತರು, ಛಾಯಾಗ್ರಾಹಕರು, ಪರಿಸರ ಅಧ್ಯಯನಕಾರರು, ಕುರುಚಲು ಕಾಡಿನ ವನ್ಯಜೀವಿಗಳ ಕಡೆಗೆ ಆಸಕ್ತಿ ತೋರಿಸುತ್ತಿರುವುದು ಧನಾತ್ಮಕ ಬೆಳವಣಿಗೆಯಾಗಿದೆ.

ಈ ಕಾಡುಗಳು ಮತ್ತು ವನ್ಯ ಜೀವಿಗಳ ಸಂರಕ್ಷಣೆಗೆ ಉಳಿದಿರುವ ಏಕೈಕ ಮಾರ್ಗವೆಂದರೆ fragmentation ಅಥವಾ ತುಂಡು ತುಂಡಾಗಿ ಛಿದ್ರಗೊಂಡಿರುವ ಕಾಡುಗಳ ಮರುಜೋಡಣೆ ಅದುವೇ Forest Corridor. ಫಾರೆಸ್ಟ್ ಕಾರಿಡಾರ್‌ಗಳು ಸೇತುವೆಯಂತೆ ತುಂಡಾದ ಎರಡು ಕಾಡುಗಳನ್ನು ಬೆಸೆದು ಪರಿಸರ ಮತ್ತು ವನ್ಯಜೀವಿಗಳ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಬಲ್ಲವು. ಈಗಾಗಲೇ ಈ ಮಾದರಿಯನ್ನು ಹಲವು ದೇಶಗಳು ಯಶಸ್ವಿಯಾಗಿ ಬಳಸಿದ ಹಲವು ಉದಾಹರಣೆಗಳಿವೆ. ಇದೇ ರೀತಿಯಾಗಿ ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಈಗಾಗಲೇ ಪ್ರಸ್ತಾಪಿಸಿದ ತುಂಡು ತುಂಡಾದ ಕುರುಚಲು ಕಾಡುಗಳನ್ನು ಬೆಸೆಯಲು Corridor Project (ಅರಣ್ಯ ಪ್ರದೇಶಗಳ ಮರು ಜೋಡಣೆ) ಅನಿವಾರ್ಯ ಮತ್ತು ಅವಶ್ಯಕ.

ಹಗರಿಬೊಮ್ಮನಹಳ್ಳಿಯ ಪರಿಸರದಲ್ಲಿ ಸಂರಕ್ಷಣೆಯಲ್ಲಿ ವೈಜ್ಞಾನಿಕವಾಗಿ ತೊಡಗಿಕೊಂಡಿರುವ "Green-HBH" ತಂಡ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಉಭಯ ಜಿಲ್ಲೆಗಳಲ್ಲಿ 11 ಪ್ರಮುಖ ಕಾರಿಡಾರ್ ಪಾಯಿಂಟ್‌ಗಳನ್ನು ಗುರುತಿಸಿದೆ. ಅದಲ್ಲದೆ ಆ ಬಗ್ಗೆ ಸವಿಸ್ತಾರವಾದ ವರದಿಯನ್ನು [D P R] ಸಿದ್ಧಪಡಿಸಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಹಸ್ತಾಂತರಿಸಿದ್ದಾರೆ.

ಆಶ್ಚರ್ಯದ ಸಂಗತಿಯೆಂದರೆ ಈ 11 ತುಂಡುಗಳನ್ನು ಬೆಸೆಯಲು ಬೇಕಾಗಿರುವುದು ಕೇವಲ 365 ಹೆಕ್ಟೇರ್ ಮಾತ್ರ. ಹಾಗೆ ಮಾಡಿದಲ್ಲಿ ಪೂರ್ವದ ದರೊಜಿಯಿಂದ ಪಶ್ಚಿಮದ ಹಲವಾಗಲುವರೆಗಿನ 150 ಕಿ.ಮೀ ನಷ್ಟು ಉದ್ದದ ಅರಣ್ಯ ಭೂಮಿಯು ಏಕೀಕರಣಗೊಳ್ಳುತ್ತದೆ.

ಮಧ್ಯಪ್ರದೇಶದ ಕುನೋ ನ್ಯಾಶನಲ್ ಪಾರ್ಕ್‌ನಲ್ಲಿ ಸುಮಾರು 19 ಹಳ್ಳಿಗಳನ್ನು ಸ್ಥಳಾಂತರಗೊಳಿಸಿ ಆಫ್ರಿಕಾದಿಂದ ಚೀತಾಗಳನ್ನು ತಂದು ಬಿಟ್ಟ ಸಾಹಸದ ಮುಂದೆ ನಮ್ಮ ಬೇಡಿಕೆ ತೀರಾ ಚಿಕ್ಕದು. ಪ್ರಪಂಚದಲ್ಲೇ ಐದನೇ ದೊಡ್ಡ ಆರ್ಥಿಕತೆ ಹೊಂದಿರುವ ಮತ್ತು ತಿಂಗಳಿಗೆ 2 ಲಕ್ಷ ಕೋಟಿಗೂ ಮೀರಿ G.S.T ತೆರಿಗೆ ಸಂಗ್ರಹಿಸುವ ವಿಕಸಿತ ಭಾರತಕ್ಕೆ 365 ಹೆಕ್ಟೇರ್ ಭೂಮಿ ಖರೀದಿಸಿ ಅರಣ್ಯ ಪರಿವರ್ತನೆ ಮಾಡುವುದು ಯಾವ ಲೆಕ್ಕಾ? ಅದೂ ಸಹ ಕಷ್ಟವಾದಲ್ಲಿ ಇಲ್ಲಿದೆ ಇನ್ನೊಂದು ಪರ್ಯಾಯ ಮಾರ್ಗ ಅದುವೇ C.A ಪಾಲಿಸಿ. ಪರಿಹಾರಾತ್ಮಕ ನಡುತೋಪು ನೀತಿ [Compensatory afforestation Policy] ಹಾಗೂ ದಂಡನಾತ್ಮಕ ಪರಿಹಾರಾತ್ಮಕ ನಡುತೋಪು ನೀತಿಗಳು ಈಗಾಗಲೇ ಜಾರಿಯಲ್ಲಿದ್ದು ಸರ್ಕಾರವು ಈ ನೀತಿಗಳನ್ನು ಬಳಸಿಕೊಂಡು ನಯಾಪೈಸೆಯ ಖರ್ಚಿಲ್ಲದೆ ಕಾರಿಡಾರ್ ಯೋಜನೆಯನ್ನು ಪೂರ್ಣಗೊಳಿಸಬಹುದು.

ಉಭಯ ಜಿಲ್ಲೆಗಳಲ್ಲಿ ಈಗಾಗಲೇ C.A Policy ಅಡಿಯಲ್ಲಿ ಹಲವು ಗಣಿಗಾರಿಕೆ ಉದ್ಯಮಗಳು, ಪವನ ವಿದ್ಯುತ್ ಉತ್ಪಾದನಾ ಸಂಸ್ಥೆಗಳು, ವಿದ್ಯುತ್ ಪ್ರಸರಣ ಸಂಸ್ಥೆಗಳು, ಸದುದ್ದೇಶಕ್ಕಾಗಿ ಅರಣ್ಯ ಭೂಮಿಯನ್ನು ಪಡೆದ ಬಳಕೆದಾರ ಸಂಸ್ಥೆಗಳಾಗಿವೆ.

C.A ನೀತಿಯ ಪ್ರಕಾರ ಅರಣ್ಯ ಭೂಮಿಪಡೆದ ಈ ಬಳಕೆದಾರ ಸಂಸ್ಥೆಗಳು "ಭೂಮಿಗೆ ಪರ್ಯಾಯವಾಗಿ ಭೂಮಿ" ಯನ್ನು ಖಾಸಗಿಯವರಿಂದ ಖರೀದಿಸಿ ಅರಣ್ಯ ಇಲಾಖೆಗೆ ಹಸ್ತಾಂತರಿಸಬೇಕು. ಅದಲ್ಲದೆ ಹಸ್ತಾಂತರಿಸಿದ ಭೂಮಿಯನ್ನು ಅರಣ್ಯೀಕರಣಗೊಳಿಸಲು ಪ್ರತಿ ಹೆಕ್ಟರ್‌ಗೆ 18 ಲಕ್ಷ ರೂಪಾಯಿಗಳನ್ನು ಅರಣ್ಯ ಇಲಾಖೆಗೆ ಪಾವತಿಸಬೇಕು.

ವಿಜಯನಗರ-ಬಳ್ಳಾರಿ ಉಭಯ ಜಿಲ್ಲೆ ಒಂದರಲ್ಲೇ ಬಳಕೆದಾರ ಸಂಸ್ಥೆಗಳು [USER AGENCY] ಸುಮಾರು 4000 ಎಕರೆಗೂ ಹೆಚ್ಚಿನ ಭೂಮಿಯನ್ನು ಅರಣ್ಯ ಇಲಾಖೆಗೆ ಕೊಡಬೇಕಾದ ಬಾಕಿ ಭೂಮಿಯಾಗಿ ಉಳಿಸಿಕೊಂಡಿವೆ!!

Forest Corridor ಯೋಜನೆಯನ್ನು ಸಾಕಾರಗೊಳಿಸಲು ಇದು ಶೂನ್ಯ ವೆಚ್ಚದ ಮಾರ್ಗ. ಸಹಜವಾಗಿ ಬಳಕೆದಾರ ಸಂಸ್ಥೆಗಳು ಯಾವ ಪ್ರದೇಶದಲ್ಲಿ ಭೂಮಿ ಕಡಿಮೆಬೆಲೆಗೆ ಸಿಗುತ್ತದೆಯೋ ಅದನ್ನೇ ಕೊಂಡುಕೊಂಡು ಅರಣ್ಯ ಇಲಾಖೆಗೆ ಹಸ್ತಾಂತರಿಸುತ್ತಾರೆಯೇ ಹೊರತು ನಮಗೆ ಅವಶ್ಯಕತೆಯಿರುವ ಕಾರಿಡಾರ್ ನಿರ್ಮಿಸಬೇಕಾದ ಭೂಮಿಯನ್ನೇನಲ್ಲ. ಇದೊಂದು ಔಪಚಾರಿಕ ಕಾರ್ಯಕ್ರಮವಾಗಿದೆ. ಸರಕಾರ ಮಾಡಬೇಕಾಗಿರುವುದು ಇಷ್ಟೇ ಹರಿದುಹಂಚಿದ ವಿಶೇಷ ಕುರುಚಲು ಕಾಡುಗಳನ್ನು ಒಂದುಗೂಡಿಸುವ ಕಾರಿಡಾರ್ ಪ್ರಾಜೆಕ್ಟ್‌ಗೆ ಬೇಕಾದ ಭೂಮಿಯನ್ನು ಆದ್ಯತೆಯ ಮೇರೆಗೆ ಕೊಡಿಸುವಂತೆ ಬಳಕೆದಾರ ಸಂಸ್ಥೆಗಳಿಗೆ ಸೂಚಿಸಬೇಕು. ಇದನ್ನು ಕಾರ್ಯಗತ ಮಾಡಿದ ಬಳಕೆದಾರ ಸಂಸ್ಥೆಗಳಿಗೆ ಪ್ರೋತ್ಸಾಹವಾಗಿ ಹೆಚ್ಚಿನ "Green Credit"ಗಳನ್ನು ನೀಡಬೇಕು.

ಹಾಗೆ ಮಾಡಿದಲ್ಲಿ ರಾತ್ರೋರಾತ್ರಿ ಪೂರ್ವದ ದರೋಜಿ ಅರಣ್ಯ ದಕ್ಷಿಣದ ಹಲವಾಗಲು ಅರಣ್ಯದವರೆಗೆ ಒಂದುಗೂಡುತ್ತದೆ. ನಾವೇ ಕಳಚಿಟ್ಟ ಕೊಂಡಿಗಳನ್ನು ಮತ್ತೊಮ್ಮೆ ಬೆಸೆದು, ಮಾಡಿದ ತಪ್ಪನ್ನು ಯಾವುದೇ ಖರ್ಚಿಲ್ಲದೆ ತಿದ್ದಿಕೊಳ್ಳಲು ಇದೊಂದು ಕೊನೆಯ ಅವಕಾಶ.

ಒಂಚೂರು ಆಸ್ಥೆ, ವನ್ಯಸಂಕುಲದ ಮೇಲಿನ ಪ್ರೀತಿ, ನಮ್ಮ ಕುರುಚಲು ಕಾಡಿನ ಬಗ್ಗೆ ಆಸಕ್ತಿ ಇದ್ದರೆ ಸಾಕು. ಈ ಯೋಜನೆಯು ಸಾಕಾರಗೊಂಡಲ್ಲಿ ನಮ್ಮ ಈ ಕುರುಚಲು ಕಾಡುಗಳು ಮುಂದೊಂದು ದಿನ ಆಫ್ರಿಕಾದ "ಸೆರೆಂಗಾಟಿ ನ್ಯಾಷನಲ್‌ಪಾರ್ಕ್'ಗೆ ಸೆಡ್ಡು ಹೊಡೆದು ನಿಲ್ಲುವುದರಲ್ಲಿ ಆಶ್ಚರ್ಯವಿಲ್ಲ.

::::::::::::::::::::::::::::::::::::::::::::

**ಅಶೋಕ ಬಾವಿಕಟ್ಟಿ**
**ಗ್ರೀನ್-ಹೆಚ್‌ಬಿಹೆಚ್,**
**ಹಗರಿಬೊಮ್ಮನಹಳ್ಳಿ, ವಿಜಯನಗರ ಜಿಲ್ಲೆ**
**ಇಮೇಲ್: ashokbavikatti@gmail.com**

ಲೇಖನ 04

# ಭೇದಿ ನಿವಾರಕ ಭೂಮಿ ಹುಣ್ಣಿಮೆ ಚರಗದಕಾಯಿ ಅಮಟೆಮರ

“ನೆಲದ ಬೊಂಬೆಗೆ ಜಲದ ಹೊದಿಕೆಯ ಹೊದಿಸಿ. ಅಗ್ನಿ ಆಭರಣ ತೊಡಿಸಿ, ಆಕಾಶದ ಅರಳೆಲೆಯ ಕಟ್ಟಿ, ವಾಯು ಸೂತ್ರಧಾರಮಂ ಹೂಡಿ ಸೂರ್ಯ ಸೋಮ ವಿಧಿಗಳೊಳಗೆ ಎಡೆಯಾಡಿಸುವ ಸೂತ್ರಿಗನಿವನಾರೋ? ಪಂಚ ಮಹಾಭೂತಗಳು ಒಂದಕ್ಕೊಂದು ಬೆಸೆದುಕೊಂಡು ನಡೆಸುವ ಕಾರ್ಯಭಾರವನ್ನು ವರ್ಣಿಸುವ ವಚನವಿದು. ಪಂಚಮಹಾಭೂತಗಳು ಸಮರ್ಪಕವಾಗಿದ್ದರೆ ಜಗದ ಜನರ ಬದುಕು. ಇಂತಹ ನೆಲ-ಜಲ-ವಾಯುಗಳ ನಡುವಿನ ಸಂಕೀರ್ಣ ವ್ಯವಸ್ಥೆ ಮಳೆ ಬೆಳೆಗಳ ಸುಸ್ಥಿರತೆಯ ಸಂಕೇತ. ಆದ್ದರಿಂದಲೇ ಮಿತ್ರರು, ನೆಂಟರನ್ನು ಕಂಡಾಗ ಮಳೆ ಬೆಳೆಗಳ ಯೋಗಕ್ಷೇಮ ವಿಚಾರಿಸುವ ಪರಿಪಾಠ ಬೆಳೆದು ಬಂದಿದೆ. ಮಾರ್ಕಾಂಡೇಯ ಪುರಾಣದಲ್ಲಿ ಮಾರ್ಕಾಂಡೇಯ ಜೈಮಿನಿ ಮಹರ್ಷಿಗಳಲ್ಲಿ ಕುಶಲೋಪರಿ ವಿಚಾರಿಸುವಾಗ ಕೇಳಿದ ಮಾತಿದು "ಕಚ್ಚಿಚ್ ಕುಶಲಂ ಬ್ರಹ್ಮನ್ ಆಶ್ರಮೇ ಮೃಗಪಕ್ಷಿಸು/ ವೃಕ್ಷೇಷಥ ಲತಾ, ಗುಲ್ಮ ತ್ವಕ್ಷಾರ ತೃಣಜಾತಿಷು" ಆಶ್ರಮದ ಮೃಗ, ಪಕ್ಷಿ, ವೃಕ್ಷ, ಬಳ್ಳಿ ಪೊದೆ, ತೊಗಟೆಯಿರುವ ಮರಗಳು, ಕಾಂಡರಹಿತ ರಸಭರಿತ ಬಾಳೆಯಂಥಹ ಗಿಡಗಳು, ಹುಲ್ಲು ಪ್ರತಿಯೊಂದು ಕುಶಲವೇ ಚೆನ್ನಾಗಿದೆಯಾ ಅಂದರೆ ಹುಲ್ಲಿನಿಂದ ಹಿಡಿದು ಕಲ್ಪವೃಕ್ಷದವರೆಗೆ ಎಲ್ಲವೂ ಇರುವ ಜೀವವಾಸ ಆರೋಗ್ಯದ ಬೀಡಾಗಬಹುದು. ನಾಡಿನಲ್ಲಿ ಸಕಲ ಜೀವ ವೈವಿಧ್ಯ ಸರಪಣಿ ಸರಿ ಇದ್ದಾಗ ಮಾತ್ರ ಅದು ಶುದ್ಧ ಪರಿಸರ ಎನ್ನಬಹುದೆಂದು ನಮ್ಮ ಪೂರ್ವಜರ ಅನುಭವ.

ವೃಕ್ಷಜಾತಿಗಳ ಸರ್ವ ಪ್ರಭೇದವೂ ಕಾಡಿನೊಳಗಿರಬೇಕು. ಅಂಥಹ ವೃಕ್ಷಗಳಲ್ಲಿ ಮಾರ್ಕಾಂಡೇಯ ಪುರಾಣದಲ್ಲಿಯೂ ಉಲ್ಲೇಖಿತ ಪ್ರಾಚೀನ ವೃಕ್ಷ ಅಮಟೆಮರ, ಗೌರಿಗಣೇಶ ಭೂಲೋಕಕ್ಕೆ ಬಂದಾಗ ಸ್ವಾಗತಿಸುವ ಫಲಾವಳಿಯಲ್ಲಿ ಅಲಂಕೃತಗೊಳ್ಳುವ ಅಮ್ರಾತಕ. ವನ ನಿರ್ಮಾಣದಲ್ಲೂ ಪಾಲ್ಗೊಳ್ಳುವ ವನರೂಪಿ ಸಸ್ಯ. ಚರಕಸೂತ್ರ, ಬೃಹತ್ಸಂಹಿತೆಯಲ್ಲೂ ವರ್ಣಿತಗೊಂಡ, ಭೇದಿ ನಿವಾರಕ ಭೂಮಿಹುಣ್ಣಿಮೆ ಪರ್ವದ ಚರಗದ ಕಾಯಿ ಅಮಟೆಮರ.



ಚಿತ್ರ ಕೃಪೆ: ರಮಕಾಂತ ನಾಯ್ಕ್

ಭಾರತದ ಉಪಖಂಡ, ಚೀನಾ ಮಲೇಷ್ಯಾ ದಕ್ಷಿಣ ಮತ್ತು ಆಗ್ನೇಯ ಏಷ್ಯಾಕ್ಕೆ ಸ್ಥಳೀಯವಾಗಿರುವ ಅಂಬಟೆಕಾಯಿಯ ಕುಲ ಜಾತಕ ನೋಡೋಣ. ಅನಕಾರ್ಡಿಯೇಸಿ ಸಸ್ಯ ಕುಟುಂಬದಲ್ಲಿ ಜನಿಸಿದ ಅಮಟೆಯ ವೈಜ್ಞಾನಿಕ ಹೆಸರು ಸ್ಪೋಂಡಿಯಾಸ್ ಪಿನ್ನಾಟ(ಮ್ಯಾಂಗಿಫೆರಾ ವೈಲ್ಡ್). ಹಿಂದಿಯಲ್ಲಿ ಅಂಬೋಧ, ಜಂಗ್ಲಿ ಆಮ್, ಇಂಗ್ಲೀಷ್ನಲ್ಲಿ ಹಾಗ್ ಪಾಮ್, ಮರಾಠಿಯಲ್ಲಿ ಅಂಬಡ, ತೆಲುಗಿನಲ್ಲಿ ಅಡವಿಮಾಮಿಡಿ, ಮಲಯಾಳಿಯಲ್ಲಿ ಅಂಬಜಂಗ, ತಮಿಳಿನಲ್ಲಿ ಮಂಪುಲಿಚ್ಚಿ ಎಂದು ಕರೆಯುತ್ತಾರೆ.

ವನದಲ್ಲಿ ವಾನರರಿಗೆ ತುಂಬಾ ಪ್ರಿಯವಾದ ಹಣ್ಣು ಇದಾಗಿರುವದರಿಂದ ಮರ್ಕಟಾಮ್ರ, ಕಪಿತನ, ಕಪಿಚೂತ, ಕಪಿಪ್ರಿಯವೆಂದು, ಅಮಟೆಯಲ್ಲಿ ಹುಳಿ ಮತ್ತು ಸಿಹಿರುಚಿಯಲ್ಲಿ ದೊರೆಯುವದರಿಂದ ಮಧುರಾಮ್ಲವೆಂದು, ಮಾವಿನ ರುಚಿ ಹೊಂದಿರುವದರಿಂದ ಆಮ್ರಾತಕವೆಂದು, ರಸಭರಿತ ಹಣ್ಣುಬಿಡುವದರಿಂದ ರಸಾಢ್ಯವೆಂದು, ಆಮ್ಲವಟಕ, ವರ್ಷಪಾಕಿ, ಶೃಂಗಿಫಲ, ತನುಕ್ಷೀರ, ಅಂಬರಾತಕ ಎಂಬುದು ಸಂಸ್ಕೃತಭಾಷೆಯಲ್ಲಿನ ನಾಮಧೇಯಗಳು. ಪ್ರಾಚೀನ ಗ್ರಂಥಗಳಾದ ಅಮರಕೋಶ, ಬ್ರಹತ್ಸಂಹಿತೆ, ಧನ್ವಂತರಿ ನಿಘಂಟು, ಭಾವಪ್ರಕಾಶ ನಿಘಂಟು, ರತ್ನಮಾಲಾ, ರಾಜನಿಘಂಟು ಮಹಾಭಾರತ, ಚರಕಸೂತ್ರ ಮಾರ್ಕಾಂಡೆಯ ಪುರಾಣದಲ್ಲಿ ಅಮಟೆಮರದ ವಿವರಗಳು ಲಭ್ಯವಿದೆ. ಗ್ರಂಥಾಲಯ ಪಾಲಕ ಗೌತಮ ಮಾಡಗೇರಿ ಅವರು ನೀಡಿದ ಮಾಹಿತಿಯಂತೆ "ಆಮ್ರಾತಕಕ ಕೇತನ ನಿಕೇತಮಳಿ ಶುಕ ಪಿಕ ವಿರಚಿತ ಪಕ್ಷಪಾತ" ಎಂದು ಶಾಂತಿಪುರಾಣದಲ್ಲಿನ ಉಲ್ಲೇಖವಿದು.

ಮಾವು ಅಂಬಟೆಮರಗಳಲ್ಲಿ ಮನೆ ಮಾಡಿರುವ ದುಂಬಿ, ಗಿಳಿ ಕೋಗಿಲೆಗಳ ಹಾರಾಟದ ವೈಭವ ನೋಡಿರಿ ಎಂದು ಖೇಚರಾಜನ ಆಡಳಿತದ ಭೂಮಿಯ ವರ್ಣನೆ ಮಾಡುತ್ತಾನೆ. "ತಿಳಕಾಮ್ರಾತಕ ಬೆಲ್ಲವತ್ತ ಸಿರಿಸಾಂಕೋಲಾಖ್ಯ ಭಲ್ಲಾತಕಾಮಳಕಾದ್ಯಂತ್ರಿ ಪಮೂಳಮಂ ಬಳಸಿ ಪುತ್ತಾದಂದು" ಎಂದು ಜೈನ ಸಾಹಿತ್ಯದಲ್ಲಿ ಅಮಟೆಮರದ ಮಾಹಿತಿ. ಮುಂಡಾ ಜನಾಂಗದವರು ತೊಗಟೆಯ ಗಂಧವನ್ನು ಕೀಲು ನೋವು ಮತ್ತು ಮಾಂಸಖಂಡದ ನೋವಿಗೆ ಔಷದವಾಗಿ ಬಳಕೆ ಮಾಡುವರು.

ಪ್ರದೇಶದಿಂದ ಪ್ರದೇಶಕ್ಕೆ ಒಂದೇ ಮರದ ಸಾಂಸ್ಕೃತಿಕವಾಗಿ ಬಳಸುವ ವಿಧಾನ ಬೇರೆ ಬೇರೆಯಾಗಿರುತ್ತದೆ. ಭೂಮಿ ಹುಣ್ಣಿಮೆ ಹಬ್ಬ ಆಚರಣೆ ಮುಗಿಯುವರೆಗೂ ಅಮಟೆ ಕಾಯಿ ತಿನ್ನಬಾರದೆಂಬ ಅಲಿಖಿತ ನಿಯಮವೊಂದು ನಮ್ಮೂರಿನ ಒಕ್ಕಲಿಗ ಸಮುದಾಯದಲ್ಲಿದೆ. ಕಾರಣ ಇಷ್ಟೆ ಭೂಮಿಹುಣ್ಣಿಮೆಯ ಭೂಮಿತಾಯಿಗೆ ನೀಡುವ ಬಯಕೆ ಊಟ ಚರಗ. ಚರಗದ ಸಿದ್ದತೆಯಲ್ಲಿ ಅನ್ನ, ವಿವಿಧ ಪ್ರಕಾರದ ಸೊಪ್ಪುಗಳೊಂದಿಗೆ ಅಮಟೆಕಾಯಿಯನ್ನು ಸೇರಿಸಿ ಚರಗ ಚೆಲ್ಲುವ ಕ್ರಮ ನವಣಗೆರೆ ಸಮೀಪದ ಮುಂಡಿಗೆಹಳ್ಳಿ ಗ್ರಾಮದ ಭೂಮಿ ಪೂಜೆಯಲ್ಲಿದೆ ಎಂದವರು ವರೆಗದ್ದೆ ಮಂಜುನಾಥ ಹೆಗಡೆ. ಗಣೇಶ ಚೌತಿಯ ಮಹಾಪರ್ವದಲ್ಲಿ ಮಂಟಪದ ಎದುರಿನಲ್ಲಿ ಕಟ್ಟುವ ಫಲಾವಳಿಯ ಸಾಲಿನಲ್ಲಿ ಕಟ್ಟುವ ವಿಶಿಷ್ಟ ಸಂಪ್ರದಾಯ ಮಲೆನಾಡಿನ ಅನೇಕ ಗ್ರಾಮಗಳಲ್ಲಿದೆ ಎಂದು ಶಿರಸಿಯ ಶಿಕ್ಷಕಿ ವಿದ್ಯಾಭಟ್ ತಮ್ಮ ಮನೆಯ ಪದ್ಧತಿ ತಿಳಿಸಿದರು. ಅಮಟೆ ಮರದ ಪೂಜೆಯೊಂದಿಗೆ ಮಾರಿಜಾತ್ರೆಯ ವಿಧಿವಿಧಾನಕೆ ಚಾಲನೆ ಕೊಡುವ ಅಪರೂಪದ ರಿವಾಜು ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿದೆ.

ಶಾಸ್ತ್ರೋಕ್ತವಾಗಿ ಅಮಟೆ ಮರಕೆ ಪೂಜೆ ಸಲ್ಲಿಸಿ ನಂತರ ಅದೇ ಮರದಿಂದ ಮಾರಿಕಾಂಬಾ ಮೂರ್ತಿಯನ್ನು ಕೆತ್ತನೆ ಮಾಡಿ ಜಾತ್ರೆಯ ಮಂಟಪದಲ್ಲಿ ಪ್ರತಿಷ್ಠಾಪಿಸಿ ಭಕ್ತರು ಪೂಜಿಸುವ ಕ್ರಮವಿದೆ ಎಂದು ಪತ್ರಕರ್ತ ಸುಬ್ರಹ್ಮಣ್ಯ ದಾಸನಕೋಡಿಗೆ ಮಾಹಿತಿ ನೀಡಿದರು. ನಮ್ಮೂರಿನ ಹಿಂದಿನ ಕಾಲದ ಮದುವೆಗಳಲ್ಲಿ ಕುಚಲಕ್ಕಿ ಅನ್ನ ಅಮಟೆಕಾಯಿ ಸಾಂಬಾರು ಕಡ್ಡಾಯವಿರುತ್ತಿತ್ತು.

ಕಾಡ ಅಮಟೆ, ಸಿಹಿ ಅಮಟೆ, ಹುಳಿ ಆಮಟೆ ಎಂಬ ಮೂರು ಪ್ರಭೇದಗಳನ್ನು ಗೌರಿ ಹಬ್ಬದ ಮಂಟಪದಲ್ಲಿ ಫಲವಳಿಗೆಗೆ ಕಟ್ಟುತ್ತಿದ್ದರು, ಅಮಟೆ ಮರದ ಚಕ್ಕೆ ತಂದು ಬಾಳೆಲೆಯಲ್ಲಿ ಹಾಕಿ ಸುತ್ತಿ ಬೂದಿಯಲ್ಲಿ ಬೇಯಿಸಿ ನಂತರ ರಸ ತೆಗೆದು ಚಟಿ ಮಾಡಿ ಅನ್ನದ ಜೊತೆಗೆ ಸೇರಿಸಿ ಊಟ ಮಾಡಿದಾಗ ಡಿಸೆಂಟ್ರಿ ಶಮನವಾಗುತ್ತದೆ ಇದು ನಮ್ಮ ಅಜ್ಜಿ ಮಾಡುವ ಔಷಧವಾಗಿತ್ತು. ಅಮಟೆಕಾಯಿ ಭೇದಿಗೆ ಔಷಧವೆಂದು ತಿಳಿಸಲು ಅಮಟೆ ಮರಕ್ಕೆ ಗುಮಟೆ ಕಟ್ಟಿ ಅದೊಂದು ಉಪಾಯ, ಅಜ್ಜಿಕುಂಡೆಗೆ ಗೆಜ್ಜೆ ಕಟ್ಟಿ ಅದೊಂದು ಉಪಾಯ" ಎಂಬ ಜನಪದದ ಒಂದು ನುಡಿಗಟ್ಟು ಪ್ರಚಲಿತದಲ್ಲಿದೆ ಎಂದು ಹೊನ್ನಾವರ ಕಡ್ನೀರು ಶಿಕ್ಷಕ ಎನ್.ಬಿ.ನಾಯ್ಕ ತಮ್ಮೂರಿನ ಅಮಟೆಕಾಯಿ ಕಥೆ ಹಂಚಿದರು.

ಅಡುಗೆ ಮನೆ ಸೇರಿ ಅಮಟೆಕಾಯಿ ತೆಳು ಗೊಜ್ಜು, ಮಂದನಗೊಜ್ಜು, ಉಪ್ಪಿನಕಾಯಿ, ಕೆಸುವಿನ ಪಲ್ಯರೂಪದಲ್ಲಿ ಖಾದ್ಯವಾಗಿ ಸಿದ್ದಗೊಳ್ಳುತ್ತದೆ. ಭೂಮಿ ಹುಣ್ಣಿಮೆ ಚರುಗೆ ಅಮಟೆಕಾಯಿ ಹಾಕಲೇಬೇಕು, ಮಂಗ ವಿಷಾಹಾರ ಸೇವಿಸಿದಾಗ ಅಮಟೆ ಸೊಪ್ಪನ್ನು ಜಗಿದು ವಿಷಬಾಧೆ ಪರಿಹರಿಸಿಕೊಳ್ಳುತ್ತವೆ.

ಪಿತ್ತ ಪ್ರಕೋಪಕ್ಕೆ ಅಮಟೆ ಚಕ್ಕೆ ಔಷಧ, ಅಮಟೆ ಮರ ಮತ್ತು ನುಗ್ಗೆಮರವನ್ನು ವಯೋವೃದ್ಧರ ಕೈಯಿಂದ ವೃಕ್ಷಾರೋಪಣ ಮಾಡಿಸುವ ಕ್ರಮವೊಂದು ಇತ್ತೆಂದು ಅಂದವರು ಯಲಸಿಯ ಶ್ರೀಪಾದ ಬಿಚ್ಚುಗತ್ತಿ..

ಯಾರ ಬಳಿ ಸಂಪತ್ತು ಧನಕನಕವಿಲ್ಲವೋ ಆ ರಿಕ್ತಹಸ್ತ ವ್ಯಕ್ತಿಯನ್ನು ಅಪಹಾಸ್ಯ ಮಾಡುವಾಗ, ಛೇಡಿಸುವಾಗ ನಿನ್ನ ಹತ್ತಿರ ಏನಿದೆ ಬೋಳ ಅಮಟೆಕಾಯಿ" ಎನ್ನುವ ಕಾಲವೊಂದಿತ್ತು. ಆದರೆ ಬಹುಪಯೋಗಿ ಅಮಟೆ ಚರ್ಮ ಹದ ಮಾಡುವಲ್ಲಿ ಇದರ ತೊಗಟೆ ಬಳಕೆಯಾಗುತ್ತಿತ್ತು. ಬೆಂಕಿಕಡ್ಡಿ ಮತ್ತು ಪೊಟ್ಟಣವನ್ನು ತಯಾರಿಸಲು ಉಪಯುಕ್ತ. ಅಳಿಲು, ಜಿಂಕೆ, ಕಾಡುಹಂದಿ, ಮಂಗಗಳಿಗೆ ಅಮಟೆಹಣ್ಣು ಬಲು ಇಷ್ಟ. ಅಮಟೆಯು ಅತಿಸಾರ, ಅನಿಯಮಿತ ಮುಟ್ಟು, ಅಜೀರ್ಣ ಮತ್ತು ವಾಕರಿಕೆ ಚಿಕಿತ್ಸೆಗಾಗಿ ಆಯುರ್ವೇದದಲ್ಲಿ ಉಲ್ಲೇಖಿಸಲಾದ ಸಸ್ಯವಾಗಿದೆ. ಗಂಟಲು, ಕಿವಿ, ಮೂಗು, ಕಣ್ಣುಗಳ ತೊಂದರೆಗಳಿಗೆ ಪರಿಣಾಮಕಾರಿ ಮದ್ದು. ಹುಣ್ಣು, ವಿಷವ್ರಣ, ಚರ್ಮ ವರ್ಣರಾಹಿತ್ಯ ಮತ್ತು ಸ್ತ್ರೀರೋಗಗಳಗೆ ಎಲೆ, ಬೇರು ತೊಗಟೆ ಒಳ್ಳೆಯ ಔಷಧಗಳು. ಜಾನುವಾರುಗಳ ಕಾಯಿಲೆಗೂ ಔಷಧವಾಗಿ ಬಳಕೆಯಿದೆ. ಅಂಬಟೆ ಎಲೆ ಹಾಗೂ ಹುಣಸೆ ಎಲೆಗಳನ್ನು ಹಾಕಿ ಬೇಯಿಸಿದ ನೀರನ್ನು ತಣಿಸಿ ಅದರಲ್ಲಿ ಸ್ನಾನ ಮತ್ತು ಕೈಕಾಲುಗಳಿಗೆ ಧಾರೆ ಹಿಡಿಯುವದರಿಂದ ಕೈಕಾಲು ಅವಶತೆ, ಬಲಹೀನತೆ ಶಮನವಾಗುತ್ತದೆ. ತುರಿಕೆ ಬರುವ ಗಡ್ಡೆ ತರಕಾರಿಗಳನ್ನು ಅಮಟೆ ಎಲೆಗಳಲ್ಲಿ ಸುತ್ತಿ ಕಟ್ಟಿ ಉಗಿಯಲ್ಲಿ ಒಮ್ಮೆ ಬೇಯಿಸಿ ನಂತರ ಅಡುಗೆಯಲ್ಲಿ ಬಳಸಿದಾಗ ತುರಿಕೆಯಾಗದ ಪದಾರ್ಥ ಸಿದ್ದಗೊಳ್ಳುತ್ತದೆ.

ಬೀಜಗಳಿಂದ, ಧಾರಕ ಸಸಿಗಳಿಂದ, ಸಸಿಕಡ್ಡಿಗಳಿಂದ ಸಸ್ಯಾಭಿವೃದ್ಧಿ ಮಾಡಬಹುದಾದ ಅಮಟೆ ಮರವನ್ನು ಆದಾಯಗಳಿಸುವರು. ಬಂಗಾಲ, ಮಹಾರಾಷ್ಟ್ರ, ಅಸ್ಸಾಂನಲ್ಲಿ ಕೃಷಿಬೆಳೆಯಾಗಿ ಬೆಳೆದು ರೈತರು "ಅಂಬಷ್ಟಬಿಲ್ವಾರ್ಜುನಾಖ್ಯಾ ವಿಕಂಕತಮಹಿರುಹಾ" ಶಾಸ್ತ್ರೀಯ ವನ ನಿರ್ಮಾಣದ ನಕ್ಷತ್ರವನದಲ್ಲಿ ಹಸ್ತ ನಕ್ಷತ್ರದ ಪ್ರತಿನಿಧಿಯಾಗಿ ವೃಕ್ಷಾರೋಪಣ ಮಾಡುವ ಅಮಟೆ ಮರವನ್ನು ನಮ್ಮ ಮನೆಯ ಹಿತ್ತಲಿಲ್ಲಿ ಬೆಳೆಯೋಣ. ಹಸಿರು ಆಹಾರ ಆರೋಗ್ಯ ಹಸಿರು ಎಂಬ ಮಾತನ್ನು ಜಗದ ಜನರಿಗೆ ತಿಳಿಸೋಣ.

**ಉಮಾಪತಿ ಭಟ್ಟ ಕೆ ವಿ**
**ಪರಿಸರ ಕಾರ್ಯಕರ್ತರು**
**ಶಿರಸಿ**

ಲೇಖನ 05

# ಸಮುದ್ರ ಹಕ್ಕಿಗಳು ತೀರ ಪ್ರದೇಶಕ್ಕೆ ತಲುಪಲು...

ರಾತ್ರಿ ಸಂಚಾರದ ಪತಂಗಗಳ ನಿರೀಕ್ಷಣೆಗಾಗಿ ದಿನ ನಿಗದಿಯಾಗಿತ್ತು. ಸಂಜೆ ಆರರಿಂದ ಆರಂಭಿಸಿ ತಡರಾತ್ರಿಯವರೆಗಿನ ಸಮಯವನ್ನು ಮೀಸಲಿರಿಸಿಟ್ಟಾಗಿತ್ತು. ಇನ್ನೇನು ಬ್ಯಾಗ್ ಪ್ಯಾಕಿನೊಂದಿಗೆ ಹೊರಡುವಷ್ಟರಲ್ಲಿ ಶಿಷ್ಯ ಚಿಂತನ್ ಫೋನಾಯಿಸಿದ. "ಸರ್, ಸ್ಟುಡಿಯೋ ಒಂದರ ಬದಿಯಲ್ಲಿ ಪಕ್ಷಿಯೊಂದು ಬಿದ್ದು ಗಾಯವಾಗಿದೆಯಂತೆ. ನೀವು ಹೋಗಿ ನೋಡಬಹುದಾ..?"

ಹಲವು ದಿನಗಳಿಂದ ಹಕ್ಕಿಯೊಂದನ್ನು ಉಪಚರಿಸಬೇಕೆನ್ನುವ ಹಂಬಲವಿತ್ತು. ಪಕ್ಷಿಗ್ರಾಮ ಕಿದೂರಿಗೆ ಹೊರಟು ನಿಂತ ಬೈಕ್ ಸಂಚಾರ ಮಾರ್ಗ ಬದಲಾಯಿಸಿತು. ಕಾಲು ಗಂಟೆಯ ಒಳಗೆ ಸ್ಟುಡಿಯೋ ತಲುಪಿತು. ನೋಡುವುದೇನು..? ಕಪ್ಪು ಬಿಳುಪಿನ, ಕೋಗಿಲೆಗಿಂತ ತೆಳ್ಳಗಿನ, ಈ ಮೊದಲು ನನ್ನ ಕಣ್ಣಿಗಂತೂ ಕಾಣಸಿಗದ ಕಡಲ ಕಾಗೆಯನ್ನು ಸಂರಕ್ಷಿಸುವ ಸೌಭಾಗ್ಯ ಒದಗಿ ಬಂತು.!

ಪಕ್ಷಿ ಪ್ರೇಮಿ ಸ್ಟುಡಿಯೋ ಮಾಲಕರು ರಟ್ಟಿನ ಪೆಟ್ಟಿಗೆಯೊಂದರಲ್ಲಿ ಹಕ್ಕಿಯನ್ನು ಬಹಳ ಜೋಪಾನವಾಗಿರಿಸಿದ್ದರು. ಉಸಿರಾಡಲು ಕಷ್ಟವಾಗದಂತೆ ಪೆಟ್ಟಿಗೆಗೆ ರಂಧ್ರಗಳನ್ನೂ ತೆರೆದಿದ್ದರು. ಹಕ್ಕಿಗೆ ದಾಹ ನೀಗಿಸಲು ನೀರು ಅಗತ್ಯವಿಲ್ಲದಿದ್ದರೂ ಗಾಯಾಳುವಿಗೆ ನೀರಿಡುವ ಸಂಪ್ರದಾಯವನ್ನು ಇಲ್ಲಿಯೂ ಅನುಸರಿಸಿದ್ದರು.

"ಇದು ಯಾವೂರಿನ ಹಕ್ಕಿ.? ಹೇಗೆ ಇಲ್ಲಿಗೆ ತಲುಪಿತು.? ಇದೇನನ್ನು ತಿನ್ನುತ್ತದೆ.? ಕನ್ನಡದಲ್ಲಿ ಏನೆನ್ನುವರು.? ಇತರ ಪಕ್ಷಿಗಳಂತೆ ಸ್ವರ ಹೊರಡಿಸುವುದಿಲ್ಲವೇ..? ಅವರು ಕೇಳಿದ ಹಲವಾರು ಪ್ರಶ್ನೆಗಳಿಗೆ ಉತ್ತರ ನೀಡಲು ಸಾಧ್ಯವಾಗಲಿಲ್ಲ. ಯಾಕೆಂದರೆ ನನ್ನ ಲೈಫ್ ಲಿಸ್ಟಿಗೆ ಅದು ಹೊಸ ಪಕ್ಷಿಯಾಗಿತ್ತು..!



ಚಿತ್ರ ಕೃಪೆ: ಜಿಷ್ಣು ಕಿಝುಕ್ಕಿಲ್ಲಮ್

"ವನ್ಯ ಜೀವಿಗಳ ಮೇಲಿನ ನಿಮ್ಮ ಪ್ರೀತಿಗೆ ನಮ್ಮದೊಂದು ಸಲಾಂ. ಸದ್ಯ ಕತ್ತಲಾಗುತ್ತಾ ಬಂತು. ಅರಣ್ಯ ಇಲಾಖೆ ಮತ್ತು ಸಮುದ್ರ ಹಕ್ಕಿಗಳ ಸ್ಪೆಷಲಿಸ್ಟ್ ಗಳ ಸಲಹೆಯಂತೆ ಆದಷ್ಟು ಬೇಗ ಪಕ್ಷಿಯನ್ನು ಸಮುದ್ರ ತೀರಕ್ಕೆ ತಲಪಿಸುವ ವ್ಯವಸ್ಥೆ ಮಾಡಬೇಕಿದೆ. ಮಿಕ್ಕಿದ್ದು ಮತ್ತೆ ಮಾತನಾಡೋಣ, ಥ್ಯಾಂಕ್ಸ್" ಎನ್ನುತ್ತಾ ಪಕ್ಷಿ ನಿರೀಕ್ಷಕ ಗೆಳೆಯ ಪ್ರಣವ್ ನೊಂದಿಗೆ ಅಲ್ಲಿಂದ ಹೊರಟೆ.

ನಮ್ಮ ಕೈಯಲ್ಲಿರುವುದು ಕಡಲ ಹಕ್ಕಿ ಎಂದು ಗೊತ್ತಾದರೂ ಅದು ಯಾವ ಕಡಲ ಹಕ್ಕಿ ಎಂಬುವುದನ್ನು ಹೇಳಬೇಕಾದರೆ ಸ್ಪಷ್ಟವಾದ ಚಿತ್ರಗಳು ಅಗತ್ಯವಾಗಿದ್ದವು. ಹಕ್ಕಿಯ ಗುರುತಿಸುವಿಕೆಗೆ ಸಾಧ್ಯವಾಗುವಂತೆ ಫೋಟೋಗಳನ್ನು ಕ್ಲಿಕ್ಕಿಸಿದೆವು. ತೀರ ಪ್ರದೇಶದಲ್ಲಿ ಕಡಲ್ಕೊರೆತಕ್ಕಾಗಿ ಹಾಸಿದ ಕಗ್ಗಲ್ಲುಗಳ ಮೇಲೆ ಹಕ್ಕಿಯನ್ನಿರಿಸಿದೆವು. ಅನತಿ ದೂರದಲ್ಲಿ ಅಡಗಿ ಕುಳಿತೆವು. ತನ್ನ ಆವಾಸ ವ್ಯವಸ್ಥೆಗೆ ಮರಳಿದ್ದೇನೆಂಬ ಸಂತೋಷದಲ್ಲಿ ರೆಕ್ಕೆ ಬಿಚ್ಚಿ ಮೈ ಕೊಡವಿತು. ಸೆಕೆಂಡುಗಳೊಳಗೆ ರೆಕ್ಕೆಗಳನ್ನು ಅಗಲಿಸಿ, ಸಮುದ್ರ ತೀರಕ್ಕೆ ಬಾಯ್ ಹೇಳುತ್ತಾ ತನ್ನ ಪ್ರಯಾಣ ಮುಂದುವರಿಸಿತು..

ಕೆರೇಬಿಯನ್ ದ್ವೀಪ ಸಮೂಹಗಳಲ್ಲಿ ಹೆಚ್ಚಾಗಿ ಕಂಡು ಬರುವ ಬ್ರೈಡೆಲ್ಡ್ ಟರ್ನ್ ಎನ್ನುವ ಹಕ್ಕಿಯದು. ವಲಸೆಯ ಸಂದರ್ಭದಲ್ಲಿ ಸಮುದ್ರದ ಅಲೆಗಳಿಗೆ ಮತ್ತು ರಭಸವಾಗಿ ಬೀಸುವ ಗಾಳಿಗೆ ಸಿಲುಕುತ್ತವೆ. ಇದರಿಂದಾಗಿ ಇವುಗಳ ಹಾರಾಟ ಮಾರ್ಗದಲ್ಲಿ ವ್ಯತ್ಯಯ ಉಂಟಾಗುತ್ತದೆ. ಪರಿಣಾಮವಾಗಿ ತೀರ ಪ್ರದೇಶಕ್ಕೆ ತಳ್ಳಲ್ಪಡುತ್ತದೆ. ಹೆಚ್ಚಾಗಿ ಇವುಗಳು ಬೆಸ್ತರಿಗೆ ಕಾಣ ಸಿಗುತ್ತವೆ. ಅವರು ಅರಣ್ಯ ಇಲಾಖೆಗೆ ಮಾಹಿತಿ ತಲುಪಿಸುತ್ತಾರೆ. ಕೂಡಲೇ ಪಕ್ಷಿ ಸಂರಕ್ಷಕರು ಸ್ಥಳಕ್ಕಾಗಮಿಸಿ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸುತ್ತಾರೆ. ಸಾಧ್ಯವಾದರೆ ಅದೇ ದಿನ ಹಕ್ಕಿಯನ್ನು ತೀರಪ್ರದೇಶಕ್ಕೆ ಕೊಂಡೊಯ್ದು ರಿಲೀಸ್ ಮಾಡುವುದು ವಾಡಿಕೆ.

ಸಾಮಾನ್ಯವಾಗಿ ಕಡಲ ಹಕ್ಕಿಗಳು ತೀರಕ್ಕಪಳಿಸಿದಾಗ ಹೊರಗೆ ಕಾಣುವಂತಹ ಗಾಯಗಳಾಗಿರುವುದಿಲ್ಲ. ಆದರೆ ಗಾಳಿಯ ವೇಗಕ್ಕೆ, ಸಮುದ್ರದ ಏರಿಳಿತಕ್ಕೆ ಸಿಲುಕಿ ಆಂತರಿಕ ಗಾಯಗಳಾಗುವುದನ್ನು ಗುರುತಿಸಲಾಗಿದೆ. ಔಷಧೋಪಾಚರಗಳಿಗೆ ಒಗ್ಗಿಕೊಳ್ಳುವುದು ಕಡಿಮೆಯೇ. ಆದ್ದರಿಂದ ಸಮುದ್ರ ಹಕ್ಕಿಗಳು ಯಾವ ತೀರ ಪ್ರದೇಶದಲ್ಲಿ ಕಂಡು ಬಂದವೋ ಅದೇ ಪರಿಸರದಲ್ಲಿ ಅವುಗಳನ್ನು ಕಂಬದ ಮೇಲೆ ಅಥವಾ ಎತ್ತರದ ಕೃತಕ ವ್ಯವಸ್ಥೆಯ ಮೇಲೆ ಇಡಲಾಗುತ್ತದೆ. ಇಷ್ಟದ ಆಹಾರವಾಗಿರುವ ಮೀನುಗಳನ್ನು ಆಹಾರವಾಗಿ ನೀಡಲಾಗುತ್ತದೆ. ಪ್ರಾಕೃತಿಕವಾಗಿ ತನ್ನ ಆರೋಗ್ಯವನ್ನು ಹಿಂಪಡೆಯುವ ವಿಶೇಷ ಶಕ್ತಿ ಇರುವುದರಿಂದ ರಾತ್ರಿ ಹಗಲಿನ ವ್ಯತ್ಯಾಸವಿಲ್ಲದೆ ಕಡಲಿನಾಚೆಗೆ ಮತ್ತೊಮ್ಮೆ ಹಾರಿಕೊಂಡು ಮರುಜನ್ಮ ಪಡೆಯುತ್ತವೆ.

ಗುಂಪುಗಳಲ್ಲಿ ವಾಸಿಸುವ ಕಡಲ ಹಕ್ಕಿಗಳು ತೀರ ಪ್ರದೇಶದಲ್ಲಿ ಹಾರಲಾರದ, ಗಾಯವಾದ ಪರಿಸ್ಥಿತಿಯಲ್ಲಿ ಕಂಡು ಬಂದರೆ ಪಕ್ಷಿ ಪ್ರೇಮಿಗಳಿಗೋ, ಅರಣ್ಯ ಇಲಾಖೆಗೋ ತಿಳಿಸುವ ಅಳಿಲ ಸೇವೆಯನ್ನು ಮಾಡಲು ನಾವು ಮರೆಯಬಾರದು. ಯಾಕೆಂದರೆ ಸಾವಿರಾರು ಕಿಲೋ ಮೀಟರ್ ದೂರದಿಂದ ಕರಾವಳಿ ತೀರ ಪ್ರದೇಶದ ಮೂಲಕ ಸಂಚರಿಸುವ ಇವುಗಳು ನಮಗೆಲ್ಲರಿಗೂ ವಿಶೇಷ ಅತಿಥಿಗಳೇ ಸರಿ.

**ಬಾಕ್ಸ್ ಐಟಮ್**

**ಮಳೆಗಾಲದಲ್ಲೇ ಹೆಚ್ಚು....**

ಸಮುದ್ರ ಹಕ್ಕಿಗಳು ನಿರಂತರವಾಗಿ ಕಡಲಿನಲ್ಲಿ ವಿಶ್ರಮಿಸುವವುಗಳು. ಆಹಾರಕ್ಕೂ, ವಿಹಾರಕ್ಕೂ ಅವರಿಗೆ ಕಡಲ ತಾಯಿಯೇ ಬಲು ಇಷ್ಟ.ಗೂಡು ಕಟ್ಟಿ ಮೊಟ್ಟೆ ಇಡಲು ಮಾತ್ರವೇ ಸಮುದ್ರದ ನಡುಗುಡ್ಡೆಗಳನ್ನು, ಸಮುದ್ರ ತೀರದ ದ್ವೀಪ ಸಮೂಹಗಳನ್ನು ಆಶ್ರಯಿಸುತ್ತವೆ.

ಇದು ಸಮುದ್ರ ಹಕ್ಕಿಗಳ ಜೀವನ ರೀತಿಯಾದರೆ ಮಳೆಗಾಲದಲ್ಲಿ ವಲಸೆ ಬರುವವುಗಳು ಕೆಲವು ರೀತಿಯ ಅಡೆ ತಡೆಗಳನ್ನು ಅನುಭವಿಸುತ್ತವೆ.

ತೆರೆಗಳ ಅಬ್ಬರ ಮತ್ತು ಸಮುದ್ರ ಗಾಳಿಯ ತೀವ್ರತೆ ಮಳೆಗಾಲದಲ್ಲಿ ಹೆಚ್ಚು. ಇದು ಅವುಗಳ ಸಂಚಾರ ಮಾರ್ಗಕ್ಕೂ ಅಪಾಯಗಳನ್ನು ಉಂಟುಮಾಡುತ್ತದೆ. ನೇರವಾಗಿ ಹಾರಲಾರದೆ, ಗಾಳಿಯ ರಭಸಕ್ಕೆ ಅದೆಲ್ಲಿಗೋ ತಲುಪಿ ತೀರ ಪ್ರದೇಶದ ಜನರಿಗೆ ಕುತೂಹಲವನ್ನುಂಟು ಮಾಡುತ್ತವೆ.

ತೀರ ಪ್ರದೇಶಗಳಿಗೆ ಸಮುದ್ರ ಹಕ್ಕಿಗಳು ಮಳೆಗಾಲದಲ್ಲಿ ಬಂದು ಅಪ್ಪಳಿಸಿದ ಹಲವು ದಾಖಲೆಗಳಿವೆ. ಇವುಗಳಲ್ಲಿ ಕೆಲವೊಂದು ಯಾವುದೇ ಸಂರಕ್ಷಣೆ ಇಲ್ಲದೆ ಕೆಲವೇ ಸಮಯದೊಳಗೆ ಹಾರಿ ಹೋದರೆ ಮತ್ತೆ ಕೆಲವು ಪಕ್ಷಿಗಳಿಗೆ ಔಷಧೀಯ ನೆರವು ಬೇಕಾಗುತ್ತದೆ. ಹಾಗೆಂದು ರೆಸ್ಕ್ಯೂ ಮಾಡಿದ ಎಲ್ಲಾ ಬಾನಾಡಿಗಳು ಬದುಕ ಬೇಕೆಂದೇನಿಲ್ಲ. ಹೆಚ್ಚಾಗಿ ಸಮುದ್ರದ ಆವಾಸ ವ್ಯವಸ್ಥೆಯಿಂದ ತೀರ ಪ್ರದೇಶಕ್ಕೆ ತಲುಪಿದಾಗ ಬಹಳಷ್ಟು ಒತ್ತಡವನ್ನು ಅನುಭವಿಸುತ್ತವೆ. ಸಮುದ್ರ ಆಹಾರವೂ ಸಿಗದಿರುವಾಗ ಸಾವು ಸಂಭವಿಸುವುದೇ ಹೆಚ್ಚು.
ಏನಿದ್ದರೂ ಸಮುದ್ರ ಹಕ್ಕಿಗಳಿಗೆ ಮಳೆಗಾಲವಂತೂ ತುಸು ನಿದ್ದೆ ಇಲ್ಲದ ದಿನಗಳಾಗಿವೆ.

**ರಾಜು ಕಿದೂರು**
**ಅಧ್ಯಾಪಕರು,**
**ಹೋಲಿ ಫ್ಯಾಮಿಲಿ ಅನುದಾನಿತ ಶಾಲೆ,**
**ಕುಂಬಳೆ, ಕೇರಳ**
**ಇಮೇಲ್: rajukidoor@gmail.com**

# ಪ್ರಾಣಿ ಪ್ರಪಂಚದ ವಿಚಿತ್ರ ಪ್ರಭೇದಗಳು

ಲೇಖನ 06

## ಕಾಲಿನ ಪಾದಗಳಿಂದ ಮಾತನಾಡುವ ಪ್ರಾಣಿ ಆನೆ

ಸ್ನೇಹಿತರೇ, ಸಾಮಾನ್ಯವಾಗಿ ಮನುಷ್ಯರಾದ ನಾವು ಬಾಯಿಯ ಮುಖಾಂತರ ಹೆಚ್ಚಾಗಿ ಮಾತನಾಡುತ್ತೇವೆ. ಆದರೆ ಆನೆಗಳು ಕಾಲಿನ ಪಾದಗಳಿಂದ ಮಾತನಾಡುತ್ತವೆ. ಈ ವಿಷಯ ತಿಳಿದು ನಿಮಗೆ ವಿಚಿತ್ರ ಎನಿಸುತ್ತಿರಬೇಕಲ್ಲವೇ..? ಹಾಗಾದರೆ ಬನ್ನಿ ಆನೆಗಳ ಬಗ್ಗೆ ಸಂಪೂರ್ಣವಾದ ಮಾಹಿತಿ ಕೊಡುತ್ತೇನೆ.

ಸ್ನೇಹಿತರೇ, ಆನೆಗಳು ಭೂಮಿಯ ಮೇಲಿನ ಅತಿದೊಡ್ಡ ಭೂ ಸಸ್ತನಿಗಳಾಗಿವೆ. ಇವು ಸ್ಪಷ್ಟವಾಗಿ ಬೃಹತ್ ದೇಹಗಳು, ದೊಡ್ಡ ಕಿವಿಗಳು ಮತ್ತು ಉದ್ದವಾದ ಸೊಂಡಿಲನ್ನು ಹೊಂದಿವೆ. ಆನೆಗಳಲ್ಲಿ ಭಾರತೀಯ, ಸವನ್ನಾ ಮತ್ತು ಅರಣ್ಯ ಎಂಬ ಮೂರು ಜಾತಿಯ ಆನೆಗಳಿವೆ. ಭಾರತೀಯ ಆನೆಯು ಚಿಕ್ಕ ಕಿವಿಗಳನ್ನು ಹೊಂದಿದೆ ಮತ್ತು ಇತರ ಎರಡು ಪ್ರಭೇದಗಳಿಗೆ ಹೋಲಿಸಿದರೆ ಇದು ತುಂಬಾ ಚಿಕ್ಕದಾಗಿದೆ. ಸವನ್ನಾ ಮತ್ತು ಅರಣ್ಯ ಆನೆಗಳು ಆಫ್ರಿಕಾದಲ್ಲಿ ವಾಸಿಸುತ್ತವೆ. ಆಫ್ರಿಕನ್ ಸವನ್ನಾ (ಬುಷ್) ಆನೆಯು ಪ್ರಪಂಚದ ಅತಿದೊಡ್ಡ ಭೂ ಪ್ರಾಣಿಯಾಗಿದೆ.


ಚಿತ್ರ ಕೃಪೆ: ಅಶೋಕ್ N

ಆನೆಗಳು ಸರಿಸುಮಾರು 3 ಮೀ ಎತ್ತರ ಮತ್ತು 6,000 ಕೆಜಿ ತೂಕವನ್ನು ಹೊಂದಿರುತ್ತವೆ. ಆನೆಯ ಮೆದುಳು ದೊಡ್ಡದಾಗಿದೆ, 9 ಮತ್ತು 13 ಪೌಂಡ್‌ಗಳ (4 ಮತ್ತು 6 ಕಿಲೋ ಗ್ರಾಂಗಳಷ್ಟು) ತೂಕವಿರುತ್ತದೆ. ಆನೆಗಳು ಹೆಚ್ಚು ಬುದ್ಧಿವಂತ ಪ್ರಾಣಿಗಳೆಂದು ಭಾವಿಸಲಾಗಿದೆ ಮತ್ತು ಅವುಗಳು ಕಲಿಯಲು ಉತ್ತಮ ಸಾಮರ್ಥ್ಯವನ್ನು ಹೊಂದಿವೆ. ಆನೆಯ ಟೆಂಪೋರಲ್ ಲೋಬ್ (ನೆನಪಿಗೆ ಸಂಬಂಧಿಸಿದ ಮೆದುಳಿನ ಪ್ರದೇಶ) ಮಾನವನಿಗಿಂತ ದೊಡ್ಡದಾಗಿದೆ ಮತ್ತು ದಟ್ಟವಾಗಿರುತ್ತದೆ. ಆದ್ದರಿಂದ 'ಆನೆಗಳು ಎಂದಿಗೂ ಮರೆಯುವುದಿಲ್ಲ'. ಹೆಚ್ಚಿದ ಬೇಟೆಯಾಡುವಿಕೆ ಮತ್ತು ಆವಾಸಸ್ಥಾನದ ನಷ್ಟದಿಂದಾಗಿ ಎಲ್ಲಾ ಆನೆಗಳು ಹೆಚ್ಚು ಅಳಿವಿನಂಚಿನಲ್ಲಿವೆ.

ಆನೆಗಳು ಹಿಂಡುಗಳಲ್ಲಿ ವಾಸಿಸುತ್ತವೆ, ಈ ಹಿಂಡುಗಳಲ್ಲಿ ಇರುವ ಆನೆಗಳು ಗುಂಪಿನಲ್ಲಿರುವ ಅತ್ಯಂತ ಹಳೆಯ ಮತ್ತು ಬುದ್ಧಿವಂತ ಹೆಣ್ಣು ಆನೆಯಿಂದ ಮಾರ್ಗದರ್ಶನ ಪಡೆಯುತ್ತವೆ. ಪ್ರತಿ ನಾಲ್ಕರಿಂದ ಐದು ವರ್ಷಗಳಿಗೊಮ್ಮೆ ಒಂದು ಹೆಣ್ಣು ಆನೆ 22 ತಿಂಗಳ ಗರ್ಭಾವಸ್ಥೆಯ ನಂತರ ಒಂದೇ ಮರಿಗೆ ಜನ್ಮ ನೀಡುತ್ತದೆ ಮತ್ತು ಅದನ್ನು ಸಂಪೂರ್ಣ ಆರೈಕೆ ಮಾಡುತ್ತದೆ. ಜನನದ ಸಮಯದಲ್ಲಿ, ಮರಿ ಆನೆ 120 ಕೆಜಿ ತೂಗುತ್ತದೆ. ಮಾತೃಪ್ರಧಾನ ಹಿಂಡುಗಳಲ್ಲಿರುವ ಚಿಕ್ಕಮ್ಮಗಳು ತಮ್ಮ ಸಹೋದರಿ ಆನೆಯ ಜೊತೆ ಸೇರಿ ಮರಿಗಳನ್ನು ಬೆಳೆಸಲು ಮತ್ತು ರಕ್ಷಿಸಲು ಸಹಾಯ ಮಾಡುತ್ತವೆ.

ಗಂಡು ಆನೆಗಳು 12 ವರ್ಷ ತಲುಪಿದಾಗ ಹಿಂಡನ್ನು ಬಿಡುತ್ತವೆ ಮತ್ತು ಅವು ಏಕಾಂತ ಜೀವನಕ್ಕೆ ಸಾಕಷ್ಟು ವಯಸ್ಸಾಗುವ ಮೊದಲು "ಸ್ನಾತಕ" ಹಿಂಡುಗಳನ್ನು ರಚಿಸುತ್ತವೆ. ನಂತರ ಅವು ವಯಸ್ಕ ಆನೆಗಳಾದಾಗ ಸಂತಾನೋತ್ಪತ್ತಿಗಾಗಿ ಹೆಣ್ಣು ಆನೆಯ ಹಿಂಡುಗಳನ್ನು ಭೇಟಿ ಮಾಡುತ್ತವೆ.


ಚಿತ್ರ ಕೃಪೆ: ಅಶೋಕ್ N

ಆನೆಗಳು ದಿನಕ್ಕೆ 2-3 ಗಂಟೆಗಳ ಕಾಲ ನಿದ್ರಿಸುತ್ತವೆ ಮತ್ತು ಉಳಿದ ಸಮಯವನ್ನು ತಿನ್ನುವುದರಲ್ಲಿ ಕಳೆಯುತ್ತವೆ. ಆನೆಗಳು ಸಸ್ಯಾಹಾರಿಗಳು (ಸಸ್ಯಗಳನ್ನು ಮಾತ್ರ ತಿನ್ನುತ್ತವೆ). ಆನೆಯ ನೆಚ್ಚಿನ ಆಹಾರವೆಂದರೆ ಜಾಲೀಗಿಡ (ಅಕೇಶಿಯಾ). ಇರುವೆಗಳು ಮರದ ಮೇಲೆ ತೆವಳಿದರೆ, ಆನೆಗಳು ಮರದಿಂದ ದೂರ ಸರಿಯುತ್ತವೆ ಏಕೆಂದರೆ ಇರುವೆಗಳು ಆನೆಯ ಸೂಕ್ಷ್ಮ ಸೊಂಡಿಲನ್ನು ಗಾಯಗೊಳಿಸುತ್ತವೆ. ಆನೆಯ ಸೊಂಡಿಲು ಮೂಗು ಮತ್ತು ಮೇಲಿನ ತುಟಿಯ ನಡುವಿನ ಸ್ನಾಯುವಿನ ಸಮ್ಮಿಲನವಾಗಿದೆ. ಚಿಕ್ಕ ಮಗು ತಮ್ಮ ಹೆಬ್ಬೆರಳನ್ನು ಬಾಯಿಯಲ್ಲಿ ಇಟ್ಟುಕೊಂಡು ಹೀರುವಂತೆ ಆನೆಯ ಮರಿಗಳು ತಮ್ಮ ಸೊಂಡಿಲನ್ನು ಬಾಯಿಯಲ್ಲಿ ಇಟ್ಟುಕೊಂಡು ಹೀರುತ್ತವೆ. ಆನೆಗಳು ತಮ್ಮ ಸೊಂಡಿಲಿನಲ್ಲಿ ಸುಮಾರು 150,000 ಸ್ನಾಯು ಘಟಕಗಳನ್ನು ಹೊಂದಿರುತ್ತವೆ.

ಆಹಾರ, ಧೂಳು, ವಾಸನೆ, ಜರಡಿ, ವಿಂಗಡಿಸುವುದು, ಸ್ಪರ್ಶಿಸುವುದು, ಧ್ವನಿ ಉತ್ಪಾದನೆ ಮತ್ತು ಸಂವಹನ, ಎತ್ತುವುದು, ತಳ್ಳುವುದು, ರಕ್ಷಣೆ ಮತ್ತು ಅಪರಾಧ ಸೇರಿದಂತೆ ಹಲವು ಇತರ ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯವನ್ನು ಸೊಂಡಿಲು ಹೊಂದಿದೆ. ಆನೆಗಳಿಗೆ ವಾಸನೆ ಮತ್ತು ಸ್ಪರ್ಶದ ಇಂದ್ರಿಯಗಳು ಬಹಳ ಮುಖ್ಯ. ತಮ್ಮ ಸೊಂಡಿಲುಗಳನ್ನು ಎಚ್ಚರಿಕೆಗಳನ್ನು ನೀಡಲು, ಇತರ ಆನೆಗಳನ್ನು ಸ್ವಾಗತಿಸಲು ಅಥವಾ ನೀರು ಕುಡಿಯಲು ಅಥವಾ ಸ್ನಾನ ಮಾಡಲು ನೀರನ್ನು ಹೀರಿಕೊಳ್ಳಲು ಬಳಸುತ್ತವೆ. ಸೊಂಡಿಲಿನಲ್ಲಿ 8 ಲೀಟರ್‌ಗಳಷ್ಟು ನೀರನ್ನು ಸಂಗ್ರಹಿಸುತ್ತವೆ. ಸೆರೆಯಲ್ಲಿ ವಾಸಿಸುವ ಆನೆಗಳು ತಮ್ಮ ಸೊಂಡಿಲುಗಳನ್ನು ಕಲಾತ್ಮಕ ಉದ್ದೇಶಗಳಿಗಾಗಿ ಬಳಸಬಹುದು. ಇವು ಕುಂಚವನ್ನು ಹಿಡಿದು ವಿವಿಧ ಚಿತ್ರಗಳನ್ನು ಚಿತ್ರಿಸಬಹುದು. ಆಫ್ರಿಕನ್ ಆನೆಗಳು ತಮ್ಮ ಸೊಂಡಿಲುಗಳ ತುದಿಯಲ್ಲಿ ಎರಡು 'ಬೆರಳುಗಳನ್ನು' ಹೊಂದಿರುತ್ತವೆ, ಆದರೆ ಏಷ್ಯಾದ ಆನೆಗಳು ಒಂದು ಬೆರಳನ್ನು ಹೊಂದಿರುತ್ತವೆ.


ಚಿತ್ರ ಕೃಪೆ: ಸಿದ್ದು ಅರಕೆರೆ

ಗಂಡು ಮತ್ತು ಹೆಣ್ಣು ಆಫ್ರಿಕನ್ ಆನೆಗಳೆರಡಲ್ಲಿಯೂ ದಂತಗಳು ಬೆಳೆಯುತ್ತವೆ ಮತ್ತು ಅವುಗಳನ್ನು ಅನೇಕ ಉದ್ದೇಶಗಳಿಗೆ ಬಳಸುತ್ತವೆ. ಈ ವಿಸ್ತರಿಸಿದ ಹಲ್ಲುಗಳನ್ನು ಆನೆಯ ಸೊಂಡಿಲನ್ನು ರಕ್ಷಿಸಲು, ವಸ್ತುಗಳನ್ನು ಎತ್ತಲು ಮತ್ತು ಚಲಿಸಲು, ಆಹಾರವನ್ನು ಸಂಗ್ರಹಿಸಲು ಮತ್ತು ಮರಗಳಿಂದ ತೊಗಟೆಯನ್ನು ತೆಗೆಯಲು ಬಳಸಬಹುದು. ಅವುಗಳನ್ನು ರಕ್ಷಣೆಗಾಗಿಯೂ ಬಳಸಬಹುದು. ಬರಗಾಲದ ಸಮಯದಲ್ಲಿ, ಆನೆಗಳು ನೆಲದಡಿಯಲ್ಲಿ ನೀರನ್ನು ಹುಡುಕಲು ರಂಧ್ರಗಳನ್ನು ಅಗೆಯಲು ತಮ್ಮ ದಂತಗಳನ್ನು ಬಳಸುತ್ತವೆ. ಏಷ್ಯಾದ ಆನೆಗಳಲ್ಲಿ ಗಂಡು ಮಾತ್ರ ದಂತಗಳನ್ನು ಹೊಂದಿರುತ್ತವೆ.

ಆನೆಯ ಚರ್ಮವು ಒಂದು ಇಂಚು (2.5ಸೆಂ.ಮೀ) ದಪ್ಪವಾಗಿರುತ್ತದೆ. ಆನೆಗಳು ತಮ್ಮ ಚರ್ಮವನ್ನು ಮುಚ್ಚಿಕೊಳ್ಳಲು ಮತ್ತು ಸೂರ್ಯನಿಂದ ರಕ್ಷಿಸಿಕೊಳ್ಳಲು ಮಣ್ಣನ್ನು ಬಳಸುತ್ತವೆ. ಆನೆಗಳು ಮಾನವರು ಕೇಳದ ಶಬ್ದಗಳನ್ನು ಉತ್ಪಾದಿಸುವ ಮೂಲಕ ಮತ್ತು ತಮ್ಮ ಕಾಲಿನ ಪಾದಗಳಲ್ಲಿರುವ ಮೃದುವಾದ ಚರ್ಮವನ್ನು ಬಳಸಿ ನೆಲದಲ್ಲಿ ಭೂಕಂಪನಗಳನ್ನು (Seismic Vibrations) ಉಂಟು ಮಾಡುವ ಮೂಲಕ ಸಂವಹನ ನಡೆಸುತ್ತವೆ.


ಚಿತ್ರ ಕೃಪೆ: ಸಿದ್ದು ಅರಕೆರೆ


ಚಿತ್ರ ಕೃಪೆ: ಸಿದ್ದು ಅರಕೆರೆ

ಆನೆಗಳ ಗುಂಪಿನಲ್ಲಿ ಯಾವುದಾದರೂ ಆನೆ ಸತ್ತರೆ ಎಲ್ಲ ಆನೆಗಳು ಸೇರಿ ಸತ್ತ ಆನೆಯ ದೇಹದ ಸುತ್ತಲೂ ಒಟ್ಟುಗೂಡುತ್ತವೆ ಮತ್ತು ಸ್ವಲ್ಪ ಸಮಯದವರೆಗೆ ಮೌನವಾಗಿರುತ್ತವೆ. ಆಮೇಲೆ ಹೊರಡುವ ಮೊದಲು ಸತ್ತ ದೇಹವನ್ನು ಮುಚ್ಚಲು ಮರದ ಟೊಂಗೆಗಳನ್ನು ಬಳಸುತ್ತವೆ.

ಆನೆಗಳು ಕನ್ನಡಿಯಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳಬಹುದು. ಆನೆಗಳು ಕಡಲೆಕಾಯಿಯನ್ನು ತಿನ್ನಲು ಇಷ್ಟಪಡುವುದಿಲ್ಲ. ದೊಡ್ಡ ಗಾತ್ರದ ಕಾರಣ, ಆನೆಗಳು ದಿನಕ್ಕೆ 150 ಕೆಜಿ ಸಸ್ಯವರ್ಗದ ಆಹಾರವನ್ನು ಸೇವಿಸುತ್ತವೆ. ಆನೆಗಳು ತಮ್ಮ ಜೀವಿತಾವಧಿಯಲ್ಲಿ ಸವೆದ ಹಲ್ಲುಗಳನ್ನು 6 ರಿಂದ 7 ಬಾರಿ ಬದಲಾಯಿಸುತ್ತವೆ. ಆನೆಗಳು ತಮ್ಮನ್ನು ತಂಪಾಗಿಸಲು ತಮ್ಮ ಕಿವಿಗಳನ್ನು ಬಡಿಯುತ್ತವೆ. ನೀರಿನಲ್ಲಿ ತಣ್ಣಗಾಗುತ್ತಿದ್ದರೆ, ಆನೆಗಳು ತಮ್ಮ ಸೊಂಡಿಲನ್ನು ಉಸಿರುಕೊಳವೆ (ಸ್ನಾರ್ಕೆಲ್) ಆಗಿ ಬಳಸುತ್ತವೆ. ಆನೆಗಳು ಕಾಡಿನಲ್ಲಿ 60-70 ವರ್ಷ ಬದುಕುತ್ತವೆ. ಸೆರೆಯಲ್ಲಿ 80 ವರ್ಷಗಳಿಗಿಂತ ಹೆಚ್ಚು ಬದುಕಬಹುದು.

ಆನೆಗಳು ಅರಣ್ಯ ಮತ್ತು ಸವನ್ನಾ ಪರಿಸರ ವ್ಯವಸ್ಥೆಗಳನ್ನು ನಿರ್ವಹಿಸಲು ಸಹಾಯ ಮಾಡುತ್ತವೆ ಮತ್ತು ಸಮೃದ್ಧ ಜೀವವೈವಿಧ್ಯದೊಂದಿಗೆ ಸಮಗ್ರವಾಗಿ ಸಂಬಂಧ ಹೊಂದಿವೆ. ಆನೆಗಳು ಪ್ರಮುಖ ಪರಿಸರ ವ್ಯವಸ್ಥೆಯ ಎಂಜಿನಿಯರ್‌ಗಳು. ಇವು ದಟ್ಟವಾದ ಅರಣ್ಯದ ಆವಾಸಸ್ಥಾನದಲ್ಲಿ ಮಾರ್ಗಗಳನ್ನು ಮಾಡುತ್ತವೆ. ಅದು ಇತರ ಪ್ರಾಣಿಗಳಿಗೆ ಹಾದುಹೋಗಲು ಅನುವು ಮಾಡಿಕೊಡುತ್ತದೆ. ಆನೆಯ ಹೆಜ್ಜೆಗುರುತು ಸೂಕ್ಷ್ಮ ಪರಿಸರ ವ್ಯವಸ್ಥೆಯನ್ನು ಸಹ ಸಕ್ರಿಯಗೊಳಿಸುತ್ತದೆ, ಅದು ನೀರಿನಿಂದ ತುಂಬಿದಾಗ, ಗೊದಮೊಟ್ಟೆಗಳು ಮತ್ತು ಇತರ ಜೀವಿಗಳಿಗೆ ನೆಲೆಯನ್ನು ಒದಗಿಸುತ್ತದೆ. ಆನೆಗಳು ನೀರಿನಲ್ಲಿ ಅದ್ಭುತವಾಗಿ ಈಜುತ್ತವೆ.

2017 ರ ಆನೆಗಳ ಗಣತಿಯ ಪ್ರಕಾರ ಭಾರತವು ಸುಮಾರು 29,964 ಆನೆಗಳಿಗೆ ನೆಲೆಯಾಗಿದೆ, ಸರ್ಕಾರದ ಅಂಕಿ ಅಂಶಗಳ ಪ್ರಕಾರ, ವಿಶ್ವದ ವನ್ಯ ಏಷ್ಯಾದ ಆನೆಗಳ ಜನಸಂಖ್ಯೆಯ 60 ಪ್ರತಿಶತಕ್ಕಿಂತ ಹೆಚ್ಚು ಭಾರತವು ಹೊಂದಿದೆ.

ಇಡೀ ದೇಶದಲ್ಲಿ 33 ಆನೆ ಸಂರಕ್ಷಣಾ ಮೀಸಲುಗಳಿವೆ, ಇದು 14 ರಾಜ್ಯಗಳು ಮತ್ತು 76,508 ಚದರ ಕಿಲೋಮೀಟರಗಳನ್ನು ವ್ಯಾಪಿಸಿದೆ.

6,399 ಆನೆಗಳ ಜನಸಂಖ್ಯೆಯನ್ನು ಹೊಂದಿರುವ ಕರ್ನಾಟಕವು ಪ್ರಮುಖ ಸ್ಥಳವಾಗಿದೆ. ಆಗಸ್ಟ್ 9, 2023 ರಂದು, ಕರ್ನಾಟಕ ಅರಣ್ಯ ಸಚಿವ ಈಶ್ವರ್ ಬಿ ಖಂಡ್ರೆ ಅವರು 2017 ರ ಜನಗಣತಿಯಿಂದ 350 ಆನೆಗಳ ಹೆಚ್ಚಳದೊಂದಿಗೆ, ದೇಶದಲ್ಲಿಯೇ ಅತಿ ಹೆಚ್ಚು ಕಾಡು ಆನೆಗಳನ್ನು ಹೊಂದಿರುವ ರಾಜ್ಯವಾಗಿದೆ ಎಂದು ಹೇಳಿದರು.

ಪ್ರತಿ ವರ್ಷ ಆಗಸ್ಟ್ 12 ರಂದು, ಪ್ರಾಣಿಗಳನ್ನು ರಕ್ಷಿಸುವುದು ಈ ಸಮಯದ ಅಗತ್ಯವಾಗಿದೆ ಎಂಬುದನ್ನು ಒತ್ತಿಹೇಳಲು ವಿಶ್ವ ಆನೆ ದಿನವನ್ನು ಆಚರಿಸಲಾಗುತ್ತದೆ. ಜಾಗತಿಕ ಮಟ್ಟದಲ್ಲಿ ಆನೆ ಸಂರಕ್ಷಣೆಯ ಬಗ್ಗೆ ಸಾರ್ವಜನಿಕ ಜಾಗೃತಿಯನ್ನು ಹೆಚ್ಚಿಸಲು ಈ ದಿನವನ್ನು ಮೀಸಲಿಡಲಾಗಿದೆ.

::::::::::::::::::::::::::::::::::::::::::::::

**ಶ್ರೀ.ನವೀನ ಪ್ಯಾಟಿಮನಿ**
ಟ್ಯಾಕ್ಸಿಡರ್ಮಿಸ್ಟ
ಪ್ರಾದೇಶಿಕ ಪ್ರಾಕೃತಿಕ ನೈಸರ್ಗಿಕ ಇತಿಹಾಸ ವಸ್ತುಸಂಗ್ರಹಾಲಯ, ಮೈಸೂರು.
(ರಾಷ್ಟ್ರೀಯ ಪ್ರಾಕೃತಿಕ ನೈಸರ್ಗಿಕ ಇತಿಹಾಸ ವಸ್ತುಸಂಗ್ರಹಾಲಯ,ನವದೆಹಲಿಯ ಪ್ರಾದೇಶಿಕ ಕೇಂದ್ರ)
ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ
ಭಾರತ ಸರ್ಕಾರ
ಇಮೇಲ್ಐಡಿ:naveenpyatimani9901@gmail.com

# ವನ್ಯ

ಹಸಿರು ಲೋಕದ ಕೌತುಕ

# ನೀವು ವನ್ಯಕ್ಕೆ ಬರಿಯಬಹುದು

"ವನ್ಯ"

ಅಘನಾಶಿನಿ ನೇಚರ್ ಫೌಂಡೇಶನ್ ಪ್ರಸ್ತುತಪಡಿಸುವ ಪ್ರಕೃತಿ, ಅರಣ್ಯ, ವನ್ಯಜೀವಿ ಮತ್ತು ಜೀವ ವೈವಿಧ್ಯತೆಗೆ ಸಂಬಂಧಪಟ್ಟ ಕನ್ನಡದ ಆನ್ಲೈನ್ ಮಾಸ ಪತ್ರಿಕೆ.

ಪ್ರಕೃತಿ, ಅರಣ್ಯ, ವನ್ಯಜೀವಿ ಮತ್ತು ಜೀವ ವೈವಿಧ್ಯತೆಗೆ ಸಂಬಂಧಪಟ್ಟ ಲೇಖನಗಳಿಗೆ ಸ್ವಾಗತ.

ಲೇಖನ ಕನ್ನಡ ಭಾಷೆಯಲ್ಲಿರಬೇಕು ಮತ್ತು 1000 ಪದಗಳಿಗೆ ಮೀರದಂತೆ ಮತ್ತು pdf ಅಥವಾ ವರ್ಡ್ ಸ್ವರೂಪದಲ್ಲಿ ಕಳುಹಿಸಬೇಕು.

ಲೇಖನವನ್ನು **aghanaashini24@gmail.com** ಗೆ ಇ-ಮೇಲ್ ಮಾಡಿ.

ಅಘನಾಶಿನಿ ನೇಚರ್ ಫೌಂಡೇಶನ್

ಜ್ಞಾನದ ಹರಿವು


ಚಿತ್ರ ಕೃಪೆ: ಅಶೋಕ್ N